೪-೫ ಪ್ರ. ಉತ್ತರ:— ಬಹಿಷ್ಕಾರ ಹೊಂದುವ ಪೂರ್ವದಲ್ಲಾಗಲೀ ಅನಂತರವಾಗಲೀ ಅಪರಾಧಿಗೆ ಪ್ರಾಯಶ್ಚಿತ್ತವಾದ ನಂತರ ಅವನ ಸಂಸರ್ಗಕ್ಕೇ ದೋಷವಿಲ್ಲದ ಮೇಲೆ ಆ ಸಂಸರ್ಗಿಯ ಸಂಸರ್ಗಕ್ಕೆ ದೋಷವು ಹ್ಯಾಗೆ ಘಟಿಸೀತು.

೬ ನೇಯ ಪ್ರಶ್ನೆ:— ಧರ್ಮ ವಿರುದ್ಧ ಅಪರಾಧ ಮಾಡಿದವರಿಗೆ ಪ್ರಾಯಶ್ಚಿತ್ತದಿಂದ ಪುನೀತ ಮಾಡುವ ವಿಷಯದಲ್ಲಿ ಧರ್ಮಾಧಿಕಾರವುಳ್ಳ ಮಠದ ಅಧಿಕಾರವೆಷ್ಟರ ಮಟಿಗೆ? ಮತ್ತು ಕ್ಷೇತ್ರಸ್ಥರ ಅಧಿಕಾರವೆಷ್ಟರ ಮಟ್ಟಿಗೆ?

ಉತ್ತರ:— ಬಹಿಷ್ಕಾರ ವಿಷಯದಲ್ಲಿ - ಶ್ರೀಮಠದ ಅಧಿಕಾರವು ತಮ್ಮ ಶಿಷ್ಯ ವರ್ಗದಲ್ಲಿ; ಕ್ಷೇತ್ರಸ್ಥರ ಅಧಿಕಾರವು ತಮ್ಮ ಕ್ಷೇತ್ರದಲ್ಲಿ ಪ್ರಾಯಶ್ಚಿತ್ತ ವಿಷಯದಲ್ಲಾದರೋ ಅಪರಾಧಿಯು ತನ್ನ ದೋಷ ನಿವೃತ್ತಿಗಾಗಿ ಪ್ರಾರ್ಥಿಸಿ ಕೊಂಡಲ್ಲಿ ಅವನಿಗೆ ವಿಧ್ಯುಕ್ತ ಪ್ರಾಯಶ್ಚಿತ್ತ ಕೊಡಲಿಕ್ಕೆ ಶ್ರೀ ಮಠದವರಾಗಲೀ ಕ್ಷೇತ್ರಸ್ಥರಾಗಲೀ ಬೇರೆ ಸಭ್ಯರಾಗಲೀ ಶಾಸ್ತ್ರರೀತ್ಯಾ ಸಮಾನ ಅಧಿಕಾರ ಉಳ್ಳವರೇ ಇರುತ್ತಾರೆ.

೭ ನೇಯ ಪ್ರಶ್ನೆ:— ಧರ್ಮ ವಿಚಾರಣೆಯ ಅಧಿಕಾರವುಳ್ಳ ಮಠದಿಂದ ಯಾವದೊಂದು ಧರ್ಮವಿರುದ್ಧ ಆರೋಪ ಕುರಿತು ಬಹಿಷ್ಕೃತಪಟ್ಟ ಮನುಷ್ಯನಲ್ಲಿ ಸದರಿ ಮಠಕ್ಕೆ ಒಳಪಡದ ಯಾವನೊಬ್ಬ ಕ್ಷೇತ್ರಸ್ಥನು ತಿಳಿದೂ ತಿಳಿದೂ ಸಂಸರ್ಗ ನಡಿಸಿದಲ್ಲಿ ಸದರಿ ಕ್ಷೇತ್ರಸ್ಥನ ಸಂಗಡ ಮಠದ ಬೇರೆ ಶಿಷ್ಯ ಜನರು ಸಂಸರ್ಗ ಮಾಡದಂತೆ ವ್ಯವಸ್ಥೆ ಮಾಡಲಿಕ್ಕೆ ಸದರಿ ಮಠಕ್ಕೆ ಅಧಿಕಾರ ಉಂಟೋ ಇಲ್ಲೋ.

ಉತ್ತರ:— ಪ್ರಾಯಶ್ಚಿತ್ತವಾಗುವ ಪೂರ್ವದಲ್ಲಿ ಅಪರಾಧಿಯ ಸಂಸರ್ಗ ಮಾಡಿದ ಮನುಷ್ಯನು ದೋಷಿಯಾಗುವನು ಸದರಿ ಸಂಸರ್ಗಿ ಯೊಡನೆ ಬೇರೆ ಶಿಷ್ಯ ಜನರು ಸಂಸರ್ಗ ಮಾಡದಂತೆ ಶ್ರೀ ಮಠದವರು ವ್ಯವಸ್ಥೆ ಮಾಡಿಕೊಳ್ಳಬಹುದು.

೮ ನೇಯ ಪ್ರಶ್ನೆ:— ಇಂಥ ಕ್ಷೇತ್ರಸ್ಥನು ಬೇರೆ ಕ್ಷೇತ್ರಸ್ಥ ಜನರೊಂದಿಗೆ ಸಂಸರ್ಗಕ್ಕೆ ಅರ್ಹನಾದಾನೋ ಹ್ಯಾಗೆ?

ಉತ್ತರ— ಅಂಥ ಕ್ಷೇತ್ರಸ್ಥನು ಪ್ರಾಯಶ್ಚಿತ್ತವಾದ ಅನಂತರವೇ ಯಾರೊಡನೆಯಾದರೂ ಸಂಸರ್ಗಕ್ಕೆ ಅರ್ಹನಾಗುತ್ತಾನೆ. ಈ ಪ್ರಕಾರ ನಮಗೆ ತೋರಿಬಂದ ಅಭಿಪ್ರಾಯಗಳನ್ನು ವಿಜ್ಞಾಪಿಸಿಕೊಂಡಿರುತ್ತೇವೆ.

ಶ್ರೀ ಸನ್ನಿಧಿಯಿಂದ ಕೇಳೋಣಾದ ಪ್ರಶ್ನೆಗಳಿಗೆ ಶಾಸ್ತ್ರಾನುಸಾರ ಈ ಮೇಲಿನ ಉತ್ತರಗಳನ್ನು ವಿವರಿಸಿಕೊಂಡಿರುತ್ತೇವೆ. ಆದರೆ ಮೇಲೆ ಬರೆದ ಪ್ರಾಯಶ್ಚಿತ್ತ ಪ್ರಕರಣದ ಸಂಬಂಧವಾಗಿಯೇ ಸನ್ನಿಧಿಯಲ್ಲಿ ಇನ್ನೂ ಸ್ವಲ್ಪ ವಿಜ್ಞಾಪಿಸಿಕೊಳ್ಳುವೆವು. ಅವುಗಳಿಗೆ ಶ್ರೀಗಳವರ ದಿವ್ಯ ಚಿತ್ತದಲ್ಲಿ ಸ್ಥಳ ದೊರೆದೀತೆಂದು ಆಶಿಸುತ್ತೇವೆ.

೧ ಶ್ರೀ ಗೋಕರ್ಣ, ಕಾಶಿ, ರಾಮೇಶ್ವರ ಕ್ಷೇತ್ರಗಳು ಸರ್ವ ಇತಿಹಾಸಗಳಲ್ಲಿ ಪ್ರಸಿದ್ಧವಾದ ಪುಣ್ಯ ಸ್ಥಳಗಳು.

ಮಹಾಭಾರತೇ ಗೋಕರ್ಣ ಕ್ಷೇತ್ರ ಪ್ರಸಂಗೇ—

" ಆದ್ಯಂ ಪಶುಪತೇಃ ಸ್ಥಾನಂ ದರ್ಶನಾದೇವ ಮುಕ್ತಿದಂ ।
ಯತ್ರ ಪಾಪೋಽಪಿ ಮನುಜಃ ಪ್ರಾಪ್ನೋತ್ಯಭಯದಂ ಪದಂ " ॥

ಇದರ ಮೇಲಿಂದ ಈ ಗೋಕರ್ಣ ಮಹಾಕ್ಷೇತ್ರದಲ್ಲಿ ಪಾಪಿಯು ಪ್ರಾಯಶ್ಚಿತ್ತ ವಿಲ್ಲದಿದ್ದರೂ ಪುನೀತನಾಗುತ್ತಾನೆಂದು ತಿಳಿಯುತ್ತದೆ. ಆದರೂ ಪೂರ್ವಜ ಮಹರ್ಷಿಗಳು ಮಾಡಿದ ಪ್ರಾಯಶ್ಚಿತ್ತಕಾಂಡ ಗೌರವದಿಂದ ಕ್ಷೇತ್ರಸ್ಥರು ಪಾಪಿಗಳಿಗೆ ಪ್ರಾಯಶ್ಚಿತ್ತ ಮಾಡಿಸುತ್ತಾರೆ. ಕ್ಷೇತ್ರೇತರ ಸ್ಥಳಗಳಲ್ಲಿ ಮಾಡಿದ ಪ್ರಾಯಶ್ಚಿತ್ತಕ್ಕೆ ಕದಾಚಿತ್ ಪರಿಷದ್ಬುದ್ಧಿ ಪ್ರಮಾದದಿಂದ ಲೋಪ ಸಂಘಟಿಸಿತು. ಕ್ಷೇತ್ರದಲ್ಲಿ ಇಂಥಾ ಲೋಪ ಸಂಘಟಿಸಿದರೂ ಕ್ಷೇತ್ರ ಮಹಿಮೆಇಂದ ಆ ಲೋಪ ಪರಿಹಾರವಾಗಿ ಪ್ರಾಯಶ್ಚಿತ್ತವು ಪೂರ್ಣತೆ ಹೊಂದಿ ಪಾಪಿಯು ಪುನೀತನಾಗುವನು.

ಅಧಿಕಾರವನ್ನು ತೋರಿಸುವದಿಲ್ಲ ಶ್ರೀ ಕ್ಷೇತ್ರದ ಮಹಾತ್ಮ್ಯವನ್ನೂ ಮಹರ್ಷಿಗಳ ವಚನಗಳನ್ನೂ ನಂಬಿ ಪಾಪಿಯು ದೋಷವು ನಿವೃತ್ತಿಯಾಗುತ್ತದೆಂತ ಖಂಡೀತವಾಗಿ ಹೇಳುತ್ತೇವೆ.

೬ ನಿರೂಪವಿಲ್ಲದೆ ಶ್ರೀ ಗೋಕರ್ಣ ಕ್ಷೇತ್ರಸ್ಥರು ಪ್ರಾಯಶ್ಚಿತ್ತ ಮಾಡಿಸಬಾರದೆಂತ ನಿವ್ಮೆಲ್ಲ ಗೃಹಸ್ಥರ ಅಗ್ರಹ ವಿರುವ ಪಕ್ಷದಲ್ಲಿ ಆ ವಿಷಯವನ್ನು ನೀವೆಲ್ಲವರು ನಿವ್ಮೊಳಗೇ ನಿರ್ಣಯಿಸಿಕೊಂಡು ನಮಗೆ ತಿಳಿಸಿದಲ್ಲಿ ನಿವ್ಮ ಅಭಿಪ್ರಾಯದಂತೆ ನಾವು ನಡಕೊಳ್ಳಲಿಕ್ಕೆ ಅಡ್ಡಿ ಇಲ್ಲ ನವ್ಮ ಗೃಹಸ್ಥರ ಅಭಿಪ್ರಾಯದ ಪ್ರಕಾರ ನಾವು ನಡಕೊಳ್ಳಲಿಕ್ಕೆ ಶಕ್ತರೇ ಹೊರತ. ಮಹರ್ಷಿಗಳ ವಚನಗಳಿಗೆ ವಿರುದ್ಧವಾಗಿ ಕ್ಷೇತ್ರದ ಶಕ್ತಿಯನ್ನು ಕಮ್ಮಿ ಪಡಿಸಿ ಹೇಳಲಿಕ್ಕೆ ನಾವು ಅಧಿಕಾರಿಗಳಲ್ಲ ನಾವು ಒಂದು ವೇಳೆ ಕಮ್ಮಿ ಎಂತ ಸಂಕೋಚ ಪಡಿಸಿ ಒಪ್ಪಿಕೊಂಡರೂ ಕ್ಷೇತ್ರದ ಶಕ್ತಿಯು ಕಮ್ಮಿಯಾಗುವಂತೆ ಇಲ್ಲ

೭ ಶ್ರೀ ಗೋಕರ್ಣ ಕ್ಷೇತ್ರಸ್ಥರು ಶ್ರೀಮಠಕ್ಕೆ ಬರಕೊಂಡ ಬಿನ್ನಹ ಪತ್ರದಲ್ಲಾಗಲಿ ಅದರ ತಾತ್ಪರ್ಯಭೂತವಾಗಿರುವ ಈ ಪತ್ರದಲ್ಲಾಗಲಿ ಏನಾದರೂ ತಪ್ಪುಗಳು ತೋರುವ ಪಕ್ಷದಲ್ಲಿ ಶ್ರೀ ಮಠದವರಾಗಲಿ ನೀವಾಗಲಿ ಪತ್ರದ್ವಾರಾ ಕೇಳಿದರೆ ನಾವು ತಕ್ಷಣವೇ ಉತ್ತರ ಬರಕೊಳ್ಳುವೆವು

೮ ಮೇಲೆ ಬರೆದ ಎಲ್ಲಾ ಸಂಗತಿಗಳನ್ನು ಪೂರ್ಣ ಮನಸಿಗೆ ತಕ್ಕೊಂಡು ತವ್ಮೆಲ್ಲವರ ಹಿತಾಹಿತವನ್ನು ಆಲೋಚಿಸಿ ನಡಕೊಳ್ಳುವಲ್ಲಿ ಪ್ರಾಜ್ಞರೇ ಇದ್ದೀರಿ.

ಇತಿ ನಿತ್ಯಾಶಿಷಃ

೧ ಹಿರೇ ಅಣ್ಣಪ್ಪ ಕುಪ್ಪಾಭಟ್ಟ ಕೃತ ನಿತ್ಯಾಶಿಷಃ
೨ ಸುಬ್ಬಡಿ ವೆಂಕಟಅಡಿ ಆಶಿಷಃ
೩ ವೆಂಕಟ ಸುಬ್ರಾಯ ಗಣಪಯ ಭಟ್ಟ ಕೃತ ನಿತ್ಯಾಶಿಷಃ
೪ ಕುಪ್ಪಯ್ಯಾ ವೆಂಕಟರಮಣ [illegible] ಕೃತ ನಿತ್ಯಾಶಿಷಃ
೫ ಗೋಪ ಗಣಪತಿದೇವರ [illegible]
೬ ಅನಂತ ಮಹಾಬಲೇಶ್ವರ ಉಪಾಧ್ಯಾಯ ಕೃತ ನಿತ್ಯಾಶಿಷಃ
೭ ಸುಬ್ರಾಯ ಕೃಷ್ಣಶಾಸ್ತ್ರಿ ಕೊಡಗಿ ನಿತ್ಯಾಶಿಷಃ
೮ ಮಹಾದೇವ ಸುಬ್ಬಾಭಟ್ಟ ಬರವಂ [illegible] ಕೃತ ನಿತ್ಯಾಶಿಷಃ
೯ ಗಣಪತಿ ನರಸಿಂಹ ಜೋಯಿಸಿ [illegible] ನಿತ್ಯಾಶಿಷಃ
೧೦ ಮಹಾಬಲೇಶ್ವರ ಶಿವರಾಮಭಟ್ಟ [illegible] ನಿತ್ಯಾಶಿಷಃ
೧೧ ದಿಕ್ಷೀತ ತಿಮ್ಮಪ್ಪ ಉಪಾಧ್ಯಾಯ ಉಪ್ಪುಂದ
೧೨ ಭಟ್ಟ ಶಿವದೇವರಭಟ್ಟ ನಿತ್ಯಾಶಿಷಃ
೧೩ ಗಣೇಶ ಸುಬ್ಬಾಭಟ್ಟ ಗಾಯತ್ರಿ ಕೃತ ನಿತ್ಯಾಶಿಷಃ
೧೪ ಬೈಲಕೇರಿ ಶಿವಭಟ್ಟ ಕೃತ ನಿತ್ಯಾಶಿಷಃ
೧೫ ನಾರಾಯಣ ಮಹಾಬಲೇಶ್ವರ ಪಂಡೀತ ಕೃತ ನಿತ್ಯಾಶಿಷಃ
೧೬ ಸುಬ್ರಹ್ಮಣ್ಯ ಪರಮೇಶ್ವರ ಭಟ್ಟ ಮಾರಕಾಂಡೆ
೧೭ ಮಾರಕಾಂಡೆ ಮಹಾಬಲ ಶಿವರಾಮ ಜೋಯಿಸಿ ನಿತ್ಯಾಶಿಷಃ
೧೮ ವಿಷ್ಣು ಗಣಪತಿ ಸಭಾಹಿತ ನಿತ್ಯಾಶಿಷಃ
೧೯ ಕೃಷ್ಣ ನಾರಾಯಣ ಭಟ್ಟ ಪ್ರಸಾದ
೨೦ ಮಾರಿಗೋಳಿ ಗಣಪ ದಿಕ್ಷೀತ ಕೃತ ನಿತ್ಯಾಶಿಷಃ

Printed by N G. Mahale at the S. G Press ANKOLA.

|| ಶ್ರೀ ||

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಾದ್ಯನೇಕ ಬಿರು ದಾಂಕಿತ ಶ್ರೀಮತ್ಸೋಂದಾ ಸ್ವರ್ಣವಲ್ಲೀ ಮಠದ ಶ್ರೀಪಾದಂ ಗಳವರ ಚರಣಾರವಿಂದಗಳಿಗೆ—

ಶ್ರೀ ಗೋಕರ್ಣ ಕ್ಷೇತ್ರಸ್ಥ ಹಿರೇಭಟ್ಟ ಅಡಿ, ಬಿಜ್ಜೂರ ಪಾಳ್ಯ ಮುಂತಾದ ಅಶೇಷ ವಿದ್ವನ್ಮಹಾಜನಂಗಳು ಪ್ರಮಾದಿ ಸಂ || ದ ಚೈತ್ರ ಬಹುಳ ೩೦ ಮಂಗಳವಾರದಲ್ಲು ವಿನಯ ಪೂರ್ವಕ ಬರಕೊಂಡ ಸಾಷ್ಟಾಂಗ ಬಿನ್ನಹಂಗಳು.

ಶ್ರೀ ಸನ್ನಿಧಿಯಿಂದ [ಕಳುಹೋಣಾದ ಶ್ರೀ ನಂಬರು ೧೦೩ ಶಕೆ ೧೮೩೪ ನೇ ಪರಿಧಾವಿ ಸಂ || ದ ಮಾಘವದ್ಯ ೧೧ ಚಂದ್ರವಾರ ಸ್ವಾರಿ ಮುಕ್ಕಾಂ ಶಿರ್ಶಿಯ ನಿರೂಪವು ಬಂದು ತಲ್ಪಿ ಅಭಿಪ್ರಾಯ ತಿಳುಕೊಂಡೆವು ಅದರೊಳಗೆ ನಮೂದಿಸಿದ ಧರ್ಮ ವ ಶಿಷ್ಟಾಚಾರ ಸಂಬಂಧೀ ಪ್ರಶ್ನೆಗಳಿಗೆ ಉತ್ತರಗಳು ಈ ಕೆಳಗೆ ವಿಜ್ಞಾಪಿಸಿ ಕೊಳ್ಳುವಂತೆ ಆಗಿರುತ್ತವೆ.

ಶ್ರೀ ಸ್ವರ್ಣವಲ್ಲಿ ಮಠದ ಶ್ರೀಗಳವರು ಸ್ವಾರ್ಥ ರಹಿತ ರಾಗಿರುವದರಿಂದ ಮಾಧ್ಯಸ್ಥ್ಯ ವನ್ನವಲಂಬಿಸಿ ಈ ಕೆಳಗೆ ವಿಜ್ಞಾಪಿಸಿಕೊಳ್ಳುವ ಉತ್ತರಗಳನ್ನು ದಿವ್ಯ ಚಿತ್ತದಲ್ಲಿ ತಂದು ಆಲೋಚಿಸ್ಯಾರೆಂದು ಪೂರ್ಣವಾಗಿ ನಂಬಿರುತ್ತೇವೆ.

೧ ನೇಯ ಪ್ರಶ್ನೆ:— ಧರ್ಮ ವಿಚಾರಣೆಯ ಅಧಿಕಾರ ಹೊಂದಿದ ಯಾವದೊಂದು ಮಠದ ಶಿಷ್ಯ ವರ್ಗದಪೈಕಿ ಯಾವನೊಬ್ಬನು ಧರ್ಮ ವಿರುದ್ಧ ಅಪರಾಧದಬಗ್ಗೆ ಸದರಿ ಮಠದಿಂದ ಬಹಿಷ್ಕೃತನಾಗಿ ಮಾಡಲ್ಪಟ್ಟ ಪ್ರಸಂಗದಲ್ಲಿ ಸದರಿ ಮಠದ ಅಪ್ಪಣೆಯ ಶಿವಾಯಿ ಸದರಿ ಅಪರಾಧಿಗೆ ಪ್ರಾಯಶ್ಚಿತ್ತಾದಿಗಳಿಂದ ಸ್ವೇಚ್ಛೆಯಿಂದ ಕ್ಷೇತ್ರಸ್ಥರು ಪುನೀತನನ್ನಾಗಿ ಮಾಡಬಹುದೋ ಹ್ಯಾಗೆ? ಹೀಗೆ ಶುದ್ಧ ಮಾಡಿದಪಕ್ಷಕ್ಕೆ ಸದರಿ ಶುದ್ಧತೆಯಿಂದ ಸದರಿ ಮಠದವರು ವ ಮಠದ ಬೇರೆ ಶಿಷ್ಯಜನರು ಬದ್ಧರಾದಾರೋ ಹ್ಯಾಗೆ?

ಉತ್ತರ:— ಶ್ರೀಮಠದಿಂದ ಬಹಿಷ್ಕೃತನಾದವನು ಯೋಗ್ಯಕಾಲದಲ್ಲಿ ಪ್ರಾಯಶ್ಚಿತ್ತವನ್ನು ಹೊಂದದೆ ಇರುವದರಿಂದ ಕಾಲವಿಲಂಬವಾಗಿ ಕರ್ಮಲೋಪ ಪ್ರಸಂಗವೂ ಅದರಿಂದ ಬಹುವಿಧ ಪ್ರಾಯಶ್ಚಿತ್ತವೂ ಘಟಿಸೀತೆಂಬ ಭಯದಿಂದ ಕ್ಷೇತ್ರಸ್ಥ ಸಭ್ಯರನ್ನು ಶಾಸ್ತ್ರರೀತ್ಯಾ ಪ್ರಾರ್ಥಿಸಿಕೊಂಡಲ್ಲಿ ಶ್ರೀಮಠದ ಅಪ್ಪಣೆ ಇಲ್ಲದಿದ್ದರೂ ಕ್ಷೇತ್ರಸ್ಥರು ಅವನಿಗೆ ಶಾಸ್ತ್ರೋಕ್ತ ಪ್ರಾಯಶ್ಚಿತ್ತವನ್ನು ಮಾಡಿಸುವದು, ಅವರ ಕರ್ತವ್ಯವಾಗಿರುತ್ತದೆ ಆ ಪ್ರಾಯಶ್ಚಿತ್ತದಿಂದ ಅಪರಾಧಿಯು (ಪಾಪಿಯು) ಪುನೀತನಾಗುತ್ತಾನೆಂಬ ವಿಷಯದಲ್ಲಿ ಏನೂ ಸಂದೇಹವಿಲ್ಲ. ಈ ವಿಷಯದಲ್ಲಿ—

೧ " ಬ್ರಾಹ್ಮಣಾ ಧರ್ಮಂ ಪ್ರಬ್ರೂಯುಃ ,,

೨ " ಬ್ರಾಹ್ಮಣಾ ಪಾಪಿನಃ ಪ್ರಾಯಶ್ಚಿತ್ತಮುಪದಿಶೇಯುಃ ,,

೩ " ಸಭ್ಯೈರುಪದೇಷ್ಟವ್ಯಂ ಪ್ರಾಯಶ್ಚಿತ್ತಂ. ,,

೪ " ಸಂಸ್ಕೃತಸ್ತುರ್ಭಿಸ್ತ್ರಿಭಿರ್ವಾ ಧರ್ಮಶಾಸ್ತ್ರ ತತ್ವಜ್ಞೈರ್ಭವತ್ಯೇಕೇನಾಪಿ ಬ್ರಹ್ಮವಿದಾ ಯತಿ ವರ್ಜ್ಯಂ ,,

ಈ ಮೊದಲಾದ ಅನೇಕಶಾಸ್ತ್ರ ಪ್ರಮಾಣಗಳಿರುತ್ತವೆ. ಪ್ರಾಯಶ್ಚಿತ್ತಹೊಂದಿದವನ ಶುದ್ಧತೆಯ ವಿಷಯದಲ್ಲಿ ಶ್ರೀಮಠ ದವರೂ ವ ಮಠದ ಬೇರೆ ಶಿಷ್ಯಜನರೂ ಶಾಸ್ತ್ರತ ಬದ್ಧರಾಗುವರೇ ಹೊರತು ಈ ವಿಷಯದಲ್ಲಿ ಕ್ಷೇತ್ರಸ್ಥರ ಸ್ವಾಧಿಕಾರಾಗ್ರಹವೇನೂ ಇರುವದಿಲ್ಲ.

೨ ನೇಯ ಪ್ರಶ್ನೆ — ಕ್ಷೇತ್ರದಲ್ಲಿ ಕ್ಷೇತ್ರಸ್ಥರು ಮಾಡಿಸುವ ಪ್ರಾಯಶ್ಚಿತ್ತದ ವ್ಯಾಪ್ತಿಯು ಎಷ್ಟರ ಮಟ್ಟಿಗಿ ರುತ್ತದೆ? ಅಂಥಾ ಪ್ರಾಯಶ್ಚಿತ್ತದಿಂದ ಅಪರಾಧಿಯು ಬೇರೆ ಕಡೆಯಲ್ಲಿ ಸಂಸರ್ಗಕ್ಕೆ ಅರ್ಹನಾದಾನೋ ಹ್ಯಾಗೆ? ಆ-ನವಾಗಿದ್ದರೆ ಯಾವ ಪ್ರಸಂಗದಲ್ಲಿ, ಆಗದಹಾಗಿದ್ದರೆ ಯಾವ ಪ್ರಸಂಗದಲ್ಲಿ

ಉತ್ತರ,— ಕ್ಷೇತ್ರಸ್ಥರಿಂದಾಗಲೀ ಬೇರೆ ಪಂಡಿತ್ಪರಿಂದಾಗಲೀ ಮಾಡಿಸಲ್ಪಟ್ಟ ಪ್ರಾಯಶ್ಚಿತ್ತದ ವ್ಯಾ- ಪ್ತಿಯು ಶುದ್ಧಿಯನ್ನು ಪೂರ್ವಸ್ಥಿತಿಗೆ ತರುವಷ್ಟರ ಮಟ್ಟಿಗಿರುತ್ತನ ಇದ್ದರಿಂದ ಅವನು ಸರ್ವತ್ರ ಸರ್ವ ಪ್ರಸಂ- ಗದಲ್ಲಿಯೂ ಪೂರ್ವದಂತೆ ಸಂಸರ್ಗಕ್ಕೆ ಅರ್ಹನಾಗುತ್ತಾನೆಂಬದು ಶಾಸ್ತ್ರದಿಂದ ಸಿದ್ಧವಾಗಿರುತ್ತದೆ.

೩ ನೇಯ ಪ್ರಶ್ನೆ — ಯಾನೊಬ್ಬ ಮನುಷ್ಯನು ಧರ್ಮ ವಿರುದ್ಧ ಅಪರಾಧಮಾಡಿ ಸದರಿ ಅಪರಾ ಧವು ಶ್ರೀಮಠದ ತಿಳುವಳಿಕೆಗೆ ಬರುವ ಪೂರ್ವದಲ್ಲಿ ಯಾವದೊಂದು ಕ್ಷೇತ್ರಕ್ಕೆ ಹೋಗಿ ಪ್ರಾಯಶ್ಚಿತ್ತಮಾಡಿಸಿ ಕೊಂಡು ಬಂದಲ್ಲಿ ಧರ್ಮ ಸಂಬಂಧೀ ವಿಷಯವಾಗಿ ಅವನ ಮೇಲಿರುವ ಮಠದ ಅಧಿಕಾರವು ನಷ್ಟವಾದೀತೋ ಹ್ಯಾಗೆ? ಅಥವಾ ಮಠದ ಅಪ್ಪಣೆಯಿಂದ ಅವನು ಪುನ: ಪ್ರಾಯಶ್ಚಿತ್ತಕ್ಕೆ ಅರ್ಹನಾದಾನೋ?

ಉತ್ತರ.— ತಾನು ಮಾಡಿದ ಅಪರಾಧವು ಮಠದ ತಿಳುವಳಿಕೆಗೆ ಬರುವ ಪೂರ್ವದಲ್ಲಾದರು ಪಾಪಿ ಯು ಕ್ಷೇತ್ರಸ್ಥರಿಂದ ಪ್ರಾಯಶ್ಚಿತ್ತ ಮಾಡಿಸಿಕೊಂಡು ಬಂದಲ್ಲಿ ಶಾಸ್ತ್ರರೀತ್ಯಾ ಅವನ ದೋಷವು ನಷ್ಟವಾದೀತೇ

ಹೊರ್ತು ಅವನ ಮೇಲೆ ಇರುವ ಶ್ರೀಮಠದ ಅಧಿಕಾರವು ನಷ್ಟವಾದೀತೆಂದು ಹೇಳಲಿಕ್ಕೆ ಬರುವಂತೆ ಇಲ್ಲ. ದೋಷವಿದ್ದರೆ ಮಾತ್ರ ಪ್ರಾಯಶ್ಚಿತ್ತವು ಘಟಿಸುತ್ತದೆಂದು ಶಾಸ್ತ್ರವು ಹೇಳುತ್ತದೆ.

೪ ನೇಯ ಪ್ರಶ್ನೆ:— ಯಾವನೊಬ್ಬನು ಧರ್ಮ ಸಂಬಂಧೀ ಅಪರಾಧಕ್ಕೋಸ್ಕರ ಮಠದಿಂದ ಬಹಿಷ್ಕೃತನಾದ ನಂತರ ಸದರಿ ಸಂಗತಿ ತಿಳಿದೂ ಯಾವನೊಬ್ಬ ಕ್ಷೇತ್ರಸ್ಥನು ಆತಗೆ ಕ್ಷೇತ್ರಕ್ಕೆ ಕರಕೊಂಡು ಹೋಗಿ ಪ್ರಾಯಶ್ಚಿತ್ತ ಕೊಟ್ಟುಕೊಂಡು ಅವನಲ್ಲಿ ಸಂಸರ್ಗ ಮಾಡಲಿಕ್ಕೆ ಬಂದೀತೋ ಹ್ಯಾಗೆ? ವ ಅಂಥ ಕ್ಷೇತ್ರಸ್ಥನೊಂದಿಗೆ ಸದರಿ ಮಠದ ಬೇರೆ ಶಿಷ್ಯಜನರು ಸಂಸರ್ಗನಡಿಸಬಹುದೋ ಹ್ಯಾಗೆ?

೫ ನೇಯ ಪ್ರಶ್ನೆ:— ಮೇಲಿನಂಥ ಕೃತ್ಯವು ಮಠದಿಂದ ಬಹಿಷ್ಕೃತನಾಗುವ ಪೂರ್ವದಲ್ಲಿ ನಡಿಸಲ್ಪಟ್ಟದ್ದರೆ ಅಂಥ ಕ್ಷೇತ್ರಸ್ಥನ ಸಂಸರ್ಗ ವಿಷಯವಾಗಿ ಏನು ಮಾಡಬೇಕು?

೪-೫ ಪ್ರ. ಉತ್ತರ:— ಬಹಿಷ್ಕಾರ ಹೊಂದುವ ಪೂರ್ವದಲ್ಲಾಗಲೀ ಅನಂತರವಾಗಲೀ ಅಪರಾಧಿಗೆ ಪ್ರಾಯಶ್ಚಿತ್ತವಾದ ನಂತರ ಅವನ ಸಂಸರ್ಗಕ್ಕೇ ದೋಷ ವಿಲ್ಲದ ಮೇಲೆ ಆ ಸಂಸರ್ಗಿಯ ಸಂಸರ್ಗಕ್ಕೆ ದೋಷವು ಹ್ಯಾಗೆ ಘಟಿಸೀತು.

೬ ನೇಯ ಪ್ರಶ್ನೆ:— ಧರ್ಮ ವಿರುದ್ಧ ಅಪರಾಧ ಮಾಡಿದವರಿಗೆ ಪ್ರಾಯಶ್ಚಿತ್ತದಿಂದ ಪುನೀತ ಮಾಡುವ ವಿಷಯದಲ್ಲಿ ಧರ್ಮಾಧಿಕಾರವುಳ್ಳ ಮಠದ ಅಧಿಕಾರವೆಷ್ಟರ ಮಟಿಗೆ? ಮತ್ತು ಕ್ಷೇತ್ರಸ್ಥರ ಅಧಿಕಾರವೆಷ್ಟರ ಮಟ್ಟಿಗೆ?

ಉತ್ತರ:— ಬಹಿಷ್ಕಾರ ವಿಷಯದಲ್ಲಿ - ಶ್ರೀಮಠದ ಅಧಿಕಾರವು ತಮ್ಮ ಶಿಷ್ಯ ವರ್ಗದಲ್ಲಿ; ಕ್ಷೇತ್ರಸ್ಥರ ಅಧಿಕಾರವು ತಮ್ಮ ಕ್ಷೇತ್ರದಲ್ಲಿ ಪ್ರಾಯಶ್ಚಿತ್ತ ವಿಷಯದಲ್ಲಾದರೋ- ಅಪರಾಧಿಯು ತನ್ನ ದೋಷ ನಿವೃತ್ತಿಗಾಗಿ ಪ್ರಾರ್ಥಿಸಿ ಕೊಂಡಲ್ಲಿ ಅವನಿಗೆ ವಿಧ್ಯುಕ್ತ ಪ್ರಾಯಶ್ಚಿತ್ತ ಕೊಡಲಿಕ್ಕೆ ಶ್ರೀ ಮಠದವರಾಗಲೀ ಕ್ಷೇತ್ರಸ್ಥರಾಗಲೀ ಬೇರೆ ಸಭ್ಯರಾಗಲೀ ಶಾಸ್ತ್ರರೀತ್ಯಾ ಸಮಾನ ಅಧಿಕಾರ ಉಳ್ಳವರೇ ಇರುತ್ತಾರೆ.

೭ ನೇಯ ಪ್ರಶ್ನೆ:— ಧರ್ಮ ವಿಚಾರಣೆಯ ಅಧಿಕಾರವುಳ್ಳ ಮಠದಿಂದ ಯಾವದೊಂದು ಧರ್ಮವಿರುದ್ಧ ಆರೋಪ ಕುರಿತು ಬಹಿಷ್ಕೃತಪಟ್ಟ ಮನುಷ್ಯನಲ್ಲಿ ಸದರಿ ಮಠಕ್ಕೆ ವಳಪಡದ ಯಾವನೊಬ್ಬ ಕ್ಷೇತ್ರಸ್ಥನು ತಿಳಿದೂ ತಿಳಿದೂ ಸಂಸರ್ಗ ನಡಿಸಿದಲ್ಲಿ ಸದರಿ ಕ್ಷೇತ್ರಸ್ಥನ ಸಂಗಡ ಮಠದ ಬೇರೆ ಶಿಷ್ಯ ಜನರು ಸಂಸರ್ಗ ಮಾಡದಂತೆ ವ್ಯವಸ್ಥೆ ಮಾಡಲಿಕ್ಕೆ ಸದರಿ ಮಠಕ್ಕೆ ಅಧಿಕಾರ ಉಂಟೋ ಇಲ್ಲೋ.

ಉತ್ತರ— ಪ್ರಾಯಶ್ಚಿತ್ತವಾಗುವ ಪೂರ್ವದಲ್ಲಿ ಅಪರಾಧಿಯ ಸಂಸರ್ಗ ಮಾಡಿದ ಮನುಷ್ಯನು ದೋಷಿಯಾಗುವನು ಸದರಿ ಸಂಸರ್ಗಿ ಯೊಡನೆ ಬೇರೆ ಶಿಷ್ಯ ಜನರು ಸಂಸರ್ಗ ಮಾಡದಂತೆ ಶ್ರೀ ಮಠದವರು ವ್ಯವಸ್ಥೆ ಮಾಡಿಕೊಳ್ಳಬಹುದು.

೮ ನೇಯ ಪ್ರಶ್ನೆ:— ಇಂಥ ಕ್ಷೇತ್ರಸ್ಥನು ಬೇರೆ ಕ್ಷೇತ್ರಸ್ಥ ಜನರೊಂದಿಗೆ ಸಂಸರ್ಗಕ್ಕೆ ಅರ್ಹನಾದಾನೋ ಹ್ಯಾಗೆ?

ಉತ್ತರ— ಅಂಥ ಕ್ಷೇತ್ರಸ್ಥನು ಪ್ರಾಯಶ್ಚಿತ್ತವಾದ ಅನಂತರವೇ ಯಾರೊಡನೆಯಾದರೂ ಸಂಸರ್ಗಕ್ಕೆ ಅರ್ಹನಾಗುತ್ತಾನೆ. ಈ ಪ್ರಕಾರ ನಮಗೆ ತೋರಿಬಂದ ಅಭಿಪ್ರಾಯಗಳನ್ನು ವಿಜ್ಞಾಪಿಸಿಕೊಂಡಿರುತ್ತೇವೆ.

ಶ್ರೀ ಸನ್ನಿಧಿಯಿಂದ ಕೇಳೋಣಾದ ಪ್ರಶ್ನೆಗಳಿಗೆ ಶಾಸ್ತ್ರಾನುಸಾರ ಈ ಮೇಲಿನ ಉತ್ತರಗಳನ್ನು ವಿವರಿಸಿಕೊಂಡಿರುತ್ತೇವೆ. ಆದರೆ ಮೇಲೆ ಬರೆದ ಪ್ರಾಯಶ್ಚಿತ್ತ ಪ್ರಕರಣದ ಸಂಬಂಧವಾಗಿಯೇ ಸನ್ನಿಧಿಯಲ್ಲಿ ಇನ್ನೂ ಸ್ವಲ್ಪ ವಿಜ್ಞಾಪಿಸಿಕೊಳ್ಳುವೆವು. ಅವುಗಳಿಗೆ ಶ್ರೀಗಳವರ ದಿವ್ಯ ಚಿತ್ತದಲ್ಲಿ ಸ್ಥಳ ದೊರೆದೀತೆಂದು ಆಶಿಸುತ್ತೇವೆ.

೧ ಶ್ರೀ ಗೋಕರ್ಣ, ಕಾಶಿ, ರಾಮೇಶ್ವರ ಕ್ಷೇತ್ರಗಳು ಸರ್ವ ಇತಿಹಾಸಗಳಲ್ಲಿ ಪ್ರಸಿದ್ಧವಾದ ಪುಣ್ಯ ಸ್ಥಳಗಳು.

ಮಹಾಭಾರತೇ ಗೋಕರ್ಣ ಕ್ಷೇತ್ರ ಪ್ರಸಂಗೆ—

“ ಅದ್ಯಂ ಪಶುಪತೆ ಸ್ಥಾನಂ ದರ್ಶನಾದೇವ ಮುಕ್ತಿದಂ ।
ಯತ್ರ ಪಾಪೋಪಿ ಮನುಜಃ ಪ್ರಾಪ್ನೋತ್ಯಭಯದಂ ಪದಂ ” ॥

ಇದರ ಮೇಲಿಂದ ಈ ಗೋಕರ್ಣ ಮಹಾಕ್ಷೇತ್ರದಲ್ಲಿ ಪಾಪಿಯು ಪ್ರಾಯಶ್ಚಿತ್ತ ವಿಲ್ಲದಿದ್ದರೂ ಪುನೀತನಾಗುತ್ತಾನೆಂದು ತಿಳಿಯುತ್ತದೆ. ಆದರೂ ಪೂರ್ವಜ ಮಹರ್ಷಿಗಳು ಮಾಡಿದ ಪ್ರಾಯಶ್ಚಿತ್ತಕಾಂಡ ಗೌರವದಿಂದ ಕ್ಷೇತ್ರಸ್ಥರು ಪಾಪಿಗಳಿಗೆ ಪ್ರಾಯಶ್ಚಿತ್ತ ಮಾಡಿಸುತ್ತಾರೆ. ಕ್ಷೇತ್ರೇತರ ಸ್ಥಳಗಳಲ್ಲಿ ಮಾಡಿದ ಪ್ರಾಯಶ್ಚಿತ್ತಕ್ಕೆ ಕದಾಚಿತ್ ಪರಿಷದ್ವಿಧಿ ಪ್ರಮಾದದಿಂದ ಲೋಪ ಸಂಘಟಿಸಿತು. ಕ್ಷೇತ್ರದಲ್ಲಿ ಇಂಥಾ ಲೋಪ ಸಂಘಟಿಸಿದರೂ ಕ್ಷೇತ್ರ ಮಹಿಮೆ ಇಂದ ಆ ಲೋಪ ಪರಿಹಾರವಾಗಿ ಪ್ರಾಯಶ್ಚಿತ್ತವು ಪೂರ್ಣತೆ ಹೊಂದಿ ಪಾಪಿಯು ಪುನೀತನಾಗುವನು.

ಆದದರಿಂದ ಪಾಪಿಗಳು ಇಲ್ಲಿ ಪ್ರಾಯಶ್ಚಿತ್ತಮಾಡಿಸಿಕೊಳ್ಳುವ ಸಾಂಪ್ರದಾಯವದೆ.

೨ ಶ್ರೀ ಗೋಕರ್ಣ ಕ್ಷೇತ್ರಸ್ಥರು ವಂಶಪರಂಪರೆಯಿಂದ ಈ ಪ್ರಾಂತಸ್ಥರಿಗೆ ಆಚಾರ್ಯರಾಗಿದ್ದು ಈ ವರೇಗೆ ವೈದಿಕ ವೃತ್ತಿಯನ್ನವಲಂಬಿಸಿಕೊಂಡು ಶ್ರೀಮಹಾಬಲೇಶ್ವರ ಚರಣ ಸನ್ನಿಧಿಯಲ್ಲಿದ್ದಿದ್ದು ಇಲ್ಲಿ ಅನಾದಿಯಿಂದ ಈ ಪರಿಷತ್ತು ಸಿದ್ಧವಾದದ್ದೇ ಅದೆ.

೧ ಹಿರೆ ಅಣ್ಣಪ್ಪ ಕುಪ್ಪಾಭಟ್ಟ.
೨ ಸುಬ್ಬಡಿ ವೆಂಕಟ ಅಡಿ.
೩ ಬಡತಿ ಶಿವದೇವರಭಟ್ಟ.
೪ ಗೋಪೀ ಗಣಪತಿದೇವರ ಭಟ್ಟ.
೫ ಉಪುಂದ ತಿಮ್ಮಪ್ಪ. ಉಪಾಧ್ಯಾಯ.
೬ ಅನಂತ ಮಹಾಬಲೇಶ್ವರ ಉಪಾಧ್ಯಾಯ
೭ ನಾರಾಯಣ ಗಣಪತಿ ಭಟ್ಟ.
೮ ಮಾರಿಗೊಳಿ ಗಣಪ ದಿಕ್ಷಿತ

ಇವರೇ ಮುಂತಾದ ಬಹಳ ಮಂದಿ ವೈದಿಕರ ಬಿನ್ನಹ ರೂಪ ಸಹಿಗಳು ಇರುತ್ತವೆ.

Printed by N. G. Mahale at the S. G. Press ANKOLA.

ಪ್ರಸಿದ್ಧಿ ಪತ್ರಿಕೆ ನಂ ೧.

ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ವರ್ಯ ಪದವಾಕ್ಯಪ್ರಮಾಣ ಪಾರಾವಾರ ಪಾರೀಣ ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಣ್ಮತಸ್ಥಾಪನಾಚಾರ್ಯ ಕ್ರಮಾಗತ ಶ್ರೌತಸ್ಮಾರ್ತಕರ್ಮಮಾರ್ಗಸ್ಥಾಪನಾಚಾರ್ಯ ಸತ್ಯಯ್ಯಾಂ ತಾದ್ಯಷ್ಟ ತಸಿದ್ಧಾಂತ ಪ್ರತಿಬಂಧ ಪ್ರವರ್ತಕ ಕರ್ಣಾಟಕ ರಾಜಧಾನಿ ವಿದ್ಯಾನಗರ ಮಹಾರಾಜಧಾನೀ ಶ್ರೀಮಲ್ಲಿಕಾಪುರವರಸಿಂಹಾಸನಾಧೀಶ್ವರ ಸರ್ವತಂತ್ರಸ್ವತಂತ್ರ ವ್ಯಾಖ್ಯಾನಸಿಂಹಾಸನಾಧಿಷ್ಠಿತ ರಾಜಾಧಿರಾಜ ಪೋಷಿತ ಗೋಕರ್ಣಮಂಡಲಾಧೀಶ ಸಪ್ತದ್ವೀಪವರಾಧೀಶ್ವರ ಶಾಲ್ಮಲೀತೀರವಾಸ ಶ್ರೀಮನ್ಲಕ್ಷ್ಮೀನೃಸಿಂಹಚಂದ್ರಮೌಳಿ ಪದಪಂಕೇರುಹರಸಗ್ರಾಹಕಾಲಿವನ್ನಾಸನಾ ಶ್ರೀಮತ್ಸೋಮಸ್ವರ್ಣವಲ್ಲೀಮಹಾಸಂಸ್ಥಾನಾಧೀಶ್ವರ ಶ್ರೀಮತ್ಸರ್ವಜ್ಞೇಂದ್ರ ಸರಸ್ವತೀ ಶ್ರೀಪಾದಂಗಳವರ ಕರಕಮಲಸಂಜಾತ ಶ್ರೀಮದ್ಗಂಗಾಧರೇಂದ್ರ ಸರಸ್ವತೀ ಶ್ರೀಸ್ವಾಮಿಭಿಃ

ಸ್ವಾಕ್ಷರ

ಅತ್ಯಂತ ಪ್ರಿಯಶಿಷ್ಯರಾದ ಶಿರ್ಸಿ, ಸಿದ್ದಾಪುರ, ಯಲ್ಲಾಪುರ, ಸುಪಾ, ಅಂಕೋಲಾ ಈ ತಾಲೂಕುಗಳ ನಿವಾಸಿಗಳಾದ ಸಮಸ್ತ ಹವ್ಯಕ ಬ್ರಾಹ್ಮಣ ವೃಂದಕ್ಕೆ —

ಸ್ಮರಣಾಪೂರ್ವಕವಾಗಿ ಬರೆಸಿ ಕಳುಹಿಸಿದ ಶ್ರೀಮುಖ. ಶಕೆ [illegible] ನೇ ಪರಿಧಾವಿ ಸಂವತ್ಸರದ ಆಷಾಢ ವದ್ಯ ೫ ಸೋಮವಾರ ಸ್ವಾರಿ ಮೊಕ್ಕಾಂ ಶಿರ್ಸಿಯಲ್ಲಿ ಬರೆಸಿದ್ದು

ಪೂರ್ವಕಾಲದಲ್ಲಿ ಅತಿಥಿತ್ವ ವಾನಪ್ರಸ್ಥರಾಗಿದ್ದ ಗುಣನಿಧಿಗಳೆಂಬ ಬ್ರಹ್ಮಚಾರಿಗಳು ಕಾಶಿಯಲ್ಲಿ ಶ್ರೀಶಂಕರಾಚಾರ್ಯರ ದರ್ಶನದಿಂದ ಅನುಗ್ರಹಕ್ಕೆ ಪಾತ್ರರಾದನಂತರ ಅವರ ಶಿಷ್ಯರಾದ ಭಾಸ್ಕರೇಂದ್ರ ಸರಸ್ವತೀ ಸ್ವಾಮಿಗಳಿಂದ ಚತುರ್ಥಾಶ್ರಮವನ್ನು ಸ್ವೀಕರಿಸಿದರು ಅವರೇ ಮೊದಲಾದವರು ಶಿಷ್ಯ ಪಾರಂಪರ್ಯವಾಗಿ ವಸತಿ ಮಾಡಿದವರು. ಅಲ್ಲಿಂದ ಉಜ್ಜಯಿನಿಗೆ ತೆರಳಿ ಅಲ್ಲಿ ಶಿಷ್ಯಪರಂಪರೆಯಿಂದ ವಸತಿ ಮಾಡಿರುವಲ್ಲಿ ಅವರ ಶಿಷ್ಯಪರಂಪರೆಯ ಅನುವಾಸರ್ಗ ನೇಯವರು ಶ್ರೀ ಗೋಕರ್ಣ ಕ್ಷೇತ್ರಕ್ಕೆ ಚಿತ್ತೈಸಿ ಈ ಪ್ರಾಂತಗಳಲ್ಲಿ ಸಂಚರಿಸಿ ಚಂದಾವರ ರಾಜರಿಂದ ಕೆಲವು ಉತ್ತಾರದ ಜಮೀನುಗಳನ್ನು ಹೊಂದಿ ಕೆಲವುಕಾಲ ಕಡತೋಕೆಯಲ್ಲಿ ಮಠವನ್ನು ಸ್ಥಾಪಿಸಿಕೊಂಡು ವಾಸಮಾಡಿ ಬನವಾಸಿಗೆ ಬಂದು ಅಲ್ಲಿಯ ರಾಜರು ತಂಮ ಆಜ್ಞಾಧೀನರಾದ ಸೋದೆ ಅರಸರಿಗೆ ಅಪ್ಪಣೆ ಮಾಡಿದಂತೆ ಅವರಿಂದ ಈಗಿದ್ದ ಮಠದಿಂದ ಸ್ವಲ್ಪ ಅಂತರದ ಮೇಲೆ ಸಹಸ್ರಲಿಂಗವೆಂಬ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿಕೊಂಡು ಅಲ್ಲಿ ಅವರೇ ಮೊದಲುಗೊಂಡು

ಶಿಷ್ಯಪಾರಂಪರ್ಯವಾಗಿ ವಾಸಿಸುತ್ತಿರುವಲ್ಲಿ ಚೋರೋಪದ್ರವವಾದ್ದರಿಂದ ಸೋದೆ ಅರಸರು ಶ್ರೀ ಶಾಲಿವಾಹನಶಕೆ ೧೪೭೮ ನೇ ರಾಕ್ಷಸ ಸಂವತ್ಸರದಲ್ಲಿ ಪುನಃ ಈಗಿದ್ದ ಶ್ರೀ ಸ್ವರ್ಣವಲ್ಲೀ ಮಠವನ್ನು ಸ್ಥಾಪಿಸಿಕೊಟ್ಟಂತೆ ಆಲಾಗಾಯಿತು ಶಿಷ್ಯಪಾರಂಪರ್ಯವಾಗಿ ಈ ಮಠದಲ್ಲಿ ಉಳಿದು ಅವರಿಂದ ಕೊಡಲ್ಪಟ್ಟ ಉತಾರಜಮೀನುಗಳ ಆಶ್ರಯದಿಂದ ಶ್ರೀ ಶಂಕರಾಚಾರ್ಯರಿಂದ ಅನುಗ್ರಹಿಸಲ್ಪಟ್ಟ ಶ್ರೀ ಲಕ್ಷ್ಮೀ ನರಸಿಂಹ ಶ್ರೀ ಚಂದ್ರಮೌಳೀಶ್ವರ ದೇವರ ಆರಾಧನಾಪರವಾಗಿ ಗಾನಂದದಲ್ಲಿ ಇದ್ದು ಶಿಷ್ಟಾಚಾರದಂತೆ ನೀವೇಮೊದಲಾದ ಸಂಸ್ಥಾನದ ಶಿಷ್ಯರ ಧರ್ಮಪರಿಪಾಲನೆ ಮಾಡಿಕೊಂಡು ಬಂದಂಥಾ ಶ್ರೀ ಶಂಕರಾಚಾರ್ಯರ ಶಿಷ್ಯಪರಂಪರಾಗತವಾದ ಪುರಾತನಕಾಲದ ಸ್ವತಂತ್ರ ಸಂಸ್ಥಾನವು ಇದು ಇರುತ್ತದೆ.

ಈ ಶಿಷ್ಯಪರಂಪರೆಗೆ ಹವೀಕ ಬ್ರಾಹ್ಮಣವಂಶಪರಂಪರೆಯಿಂದ ಈಪರಿಯಂತರಾ ಪರಸ್ಪರ ಅಭಿಮಾನದೊರಕುತ್ತಾ ಬಂದಿರುವಲ್ಲಿ ಈಗ ಶ್ರೀ ಸಂಸ್ಥಾನದ ಸ್ವಾಮಿಯು ಸಂಸ್ಥಾನಕ್ಕೆ ಒಪ್ಪಿದ ಘಟ್ಟದಕೆಳಗಿನ ಪ್ರಾಂತದ ಶಿಷ್ಯಜನರ ಅನುಗ್ರಹಾರ್ಥವಾಗಿಯೂ ಸಂಸ್ಥಾನದ ಜೀರ್ಣೋದ್ಧಾರಕಾಣಿಕೆ ಸಾಲಾಬಾದ ಕಾಣಿಕೆಗಳನ್ನು ವಸೂಲು ಮಾಡುವ ಸಲುವಾಗಿಯೂ ಪರಿವಾರದೊಡನೆ ಶಕೆ ೧೮೨೯ ನೇ ಪ್ಲವಂಗ ಸಂವತ್ಸರದಿಂದ ಈವರಿಗೆ ಎರಡುಸಾರಿ ಸಂಸ್ಥಾನದಸ್ವಾರಿಯು ಸಂಚರಿಸಲ್ಪಟ್ಟಿತು. ಆದರೆ ಮೇಲಿನಂತೆ ಉದ್ದೇಶಿಸಿ ಸಂಚರಿಸಲ್ಪಟ್ಟ ಕಾರ್ಯಗಳಲ್ಲಿ ಪ್ರತಿಸ್ವಾರಿಯಲ್ಲಿ ಪೂರ್ವಪದ್ಧತಿಗನುಸರಿಸಿ ಆಪ್ರಾಂತದಲ್ಲಿ ವಸತಿಮಾಡಿಕೊಂಡಿರುವ ಹವೀಕಬ್ರಾಹ್ಮಣರಿಗೆ ಸಾಲಾಬಾದಕಾಣಿಕೆ ಮತ್ತು ಮಠದ ಜೀರ್ಣೋದ್ಧಾರ ಸಂಬಂಧಾ ವಿಶೇಷ ಕಾಣಿಕೆ ಸಹಿತಾಕೊಟ್ಟು ಅನುಗ್ರಹಕ್ಕೆ ಪಾತ್ರರಾಗಬೇಕೆಂತ ನಿರೂಪಬರಿಸಿ ಬಹಳ ಪ್ರಯತ್ನ ನಡಿಸಲ್ಪಟ್ಟಿತು ಆದರೆ ಕಾಲಾನುಸಾರವಾಗಿ ಚಂದಾವರ ಶೀಮೆಗೆ ಒಳಪಟ್ಟ ಕೆಕ್ಕಾರ. ಕಡತೋಕೆ. ಹೊಸಾಕುಳಿ, ಕರ್ಕಿ, ಹೆಗಡೆ, ಬಾಡ, ಹೊನ್ನಗದ್ದೆ ವಗೈರೆ ಗ್ರಾಮಗಳ ಮತ್ತು ಗೇರಸಪ್ಪೆಶೀಮೆ, ಖರ್ವ, ಹಡ್ನಬಾಳ. ಇಡಗುಂಜಿ, ಮಾಳಕೋಡ ವಗೈರೆ ಗ್ರಾಮಗಳ ವ ಹರೀಟಿ ಶೀಮೆಗೆ ಸಲ್ಲಿದ ಹವೀಕ ಬ್ರಾಹ್ಮಣರಿಂದ ಸಂಸ್ಥಾನವು ಉದ್ದೇಶಿಸಿದ ಈಕಾರ್ಯವಾಗಲೀ ಪೂರ್ವಪದ್ಧತಿಗನುಸರಿಸಿ ಸಂಸ್ಥಾನದ ಸಾಭಿಮಾನವಾಗಲೀ ಕೂಡಾ ಆಗಲ್ಪಡಲಿಲ್ಲಂಬದು ಸಂಸ್ಥಾನ ಸಾಭಿಮಾನಉಳ್ಳ ಶಿಷ್ಯರಾದ ನಿಂಮೆಲ್ಲರ ತಿಳುವಳಿಕೆಯಲ್ಲಿ ತರಬೇಕೆಂದು ಶ್ರೀದೇವರ ಪ್ರೇರಣೆಯಾದ್ದರಿಂದ ಈ ನಿರೂಪ ಬರಸಿ ಇರುತ್ತದೆ ಈ ನಿರೂಪದ ಅಭಿಪ್ರಾಯವನ್ನು ನೀವು ತಿಳಕೊಂಡು ನಿಂಮ ಹದ್ದಿನಲ್ಲಿ ವಾಸಿಸಿರುವ ಸಂಸ್ಥಾನದ ಶಿಷ್ಯಜನರಿಗೆ ಸಹಾ ತಿಳಿಸತಕ್ಕದ್ದು. ಬಲ್ಲಂಥ ಸಂಸ್ಥಾನಾಭಿಮಾನಿಗಳಿಗೆ ಹೆಚ್ಚಿಗೆ ನಿರೂಪಿಸುವದೇನು?

(Star of Kanara Press, Kumta)

ಶ್ರೀ

ಮ. ೨೮. 1913

ಶ್ರೀ [illegible] ಸನ್ನಿಧಾನಕ್ಕೆ

[illegible] ನಮಸ್ಕಾರ

[illegible] ಬಿನ್ನಹ. ಪ್ರೇಮಾದಿನಂ [illegible]

[illegible]

[illegible]

[illegible]

[illegible]

[illegible]

[illegible]

ಇಂತಿ ಬಿನ್ನಹಂಗಳು

[illegible]

(Star of K. P. Kumta.)

ಶ್ರೀ ನಾರಾಯಣ.

ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ವರ್ಯ ಪದವಾಕ್ಯಪ್ರಮಾಣ ಪಾರಾವಾರ ಪಾರೀಣಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಣ್ಮತವ್ಯವಸ್ಥಾಪನಾಚಾರ್ಯ ಕ್ರಮಾಗತ ಶ್ರೌತಸ್ಮಾರ್ತಕರ್ಮಮಾರ್ಗವ್ಯವಸ್ಥಾಪಕಾಶೇಷತ್ರಯ್ಯಂತಾದ್ವೈತಸಿದ್ಧಾಂತಪ್ರಬಂಧಪ್ರವರ್ತಕತ್ವಾದಿರಾಜಧಾನೀ ವಿದ್ಯಾನಗರಮಹಾರಾಜಧಾನೀ ಶ್ರೀಮತ್ಸುಬಾಪುರವರಸಿಂಹಾಸನಾಧೀಶ್ವರ ಸರ್ವತಂತ್ರಸ್ವತಂತ್ರವ್ಯಾಖ್ಯಾನಸಿಂಹಾಸನಾಧಿಷ್ಠಿತ ರಾಜಾಧಿರಾಜ ದೇಶಿಕ ಗೋಕರ್ಣಮಂಡಲಾಧೀಶ ಸಹ್ಯಾದ್ರಿಪುರವರಾಧೀಶ್ವರ ಶಾಲ್ಮಲೀತೀರವಾಸ ಶ್ರೀಮನ್‌ಲಕ್ಷ್ಮೀನೃಸಿಂಹಚಂದ್ರಮೌಳಿ ಪದಪಂಕೇರುಹರಸಗ್ರಾಸಾಭಿಷಣ್ಣಮಾನಸಾ ಶ್ರೀಮತ್ಸ್ವೀದಾಸ್ವರ್ಣವಲ್ಲಿಮಹಾಸಂಸ್ಥಾನಾಧೀಶ್ವರ ಶ್ರೀಮತ್ಸರ್ವಜ್ಞೇಂದ್ರ ಸರಸ್ವತೀ ಶ್ರೀಪಾದಂಗಳವರ ಕರಕಮಲಸಂಜಾತ ಶ್ರೀಮದ್ಗಂಗಾಧರೇಂದ್ರಸರಸ್ವತೀ ಶ್ರೀಸ್ವಾಮಿಭಿಃ

ಅಸ್ಮಾಕಂ

ಅತ್ಯಂತ ಪ್ರಿಯ ಶಿಷ್ಯರಾದ ಶಿರ್ಶಿ, ಸಿದ್ಧಾಪುರ, ಯಲ್ಲಾಪುರ, ಅಂಕೋಲಾ, ಸುಪಾ, ಈತಾಲೂಕಗಳೊಳಗಿನ ಅಶೇಷ ಹವ್ಯಕವೃಂದಕ್ಕೆ .... ಸ್ಮರಣಪೂರ್ವಕವಾಗಿ ಬರಿಸಿ ಪಾಲಿಸಿದ ನಿರೂಪ:— ಶಕ ೧೮೩೬ನೇ ಆನಂದನಾಮಸಂವತ್ಸರದ ವೈಶಾಖ ವದ್ಯ ೧೩ ಯು ಶುಕ್ರವಾರ ಸ್ವಾರಿ ಮುಕ್ಕಾಮು ಶ್ರೀಮಠದಲ್ಲು ತರುವಾಯು . ... ಇದೇ ಆನಂದಸಂವತ್ಸರದ ಚೈತ್ರ ಶುದ್ಧ ೧೦ ಯಲ್ಲು ಶ್ರೀಸಂಸ್ಥಾನದ ಅನುಮತಿಯಿಂದ ಈಸಂಸ್ಥಾನದ ಕೆಲವು ಶಿಷ್ಯರು ಹೊರಡಿಸಿದ ನಿಮಂತ್ರಣಪತ್ರಿಕೆಯ ಮೇಲಿಂದ ಕಳೆದ ವೈಶಾಖ ವದ್ಯ ೪-೯ ಮಿತಿಗಳಲ್ಲಿ ಈ ಸಂಸ್ಥಾನದ ಕೆಲವು ಶಿಷ್ಯ ಜನರು ಶ್ರೀಮಠದಲ್ಲಿ ಕೂಡಿನಿ ಮಂತ್ರಣ ಪತ್ರಿಕೆಯಲ್ಲಿ ನಮೂದಿಸಿದ ವಿಷಯಗಳಲ್ಲಿ ಕೆಲವುಗಳ ಕುರಿತು ಚರ್ಚೆನಡಿಸಿಪಟ್ಟ ಅಭಿಪ್ರಾಯಗಳಂನ್ನು ನಮೂದಿಸಿರುವ ಸಭೆಯ ಕಾರ್ಯಕ್ರಮಪತ್ರಿಕೆ ಸಂಸ್ಥಾನದ ಮಂಜೂರಿ ನಿರೂಪಸಹಿತ ಸಂಸ್ಥಾನದ ಅಶೇಷ ಶಿಷ್ಯವೃಂದಕ್ಕೆ ಘಾಯಿಷ ಮಾಡುವಬಗ್ಗೆ ಬಿನ್ನೈಸಿಕೊಂಡು ಸಂಸ್ಥಾನದಕಡೆ ಕೊಟ್ಟಿದ್ದರ ಮಜಕೂರು ಈ ನಿರೂಪಿನ ಕೆಳಗೆ ಉಲ್ಲೇಖಿಸಿರುತ್ತದೆ.

೧. ನಮ್ಮ ಹವ್ಯಕಜನರ ಹೀನಸ್ಥಿತಿಯ ಮೂಲಕಾರಣವು ನಮ್ಮ ಜನರ ವಿದ್ಯಾವಿಹೀನತ್ವವ, ತನ್ಮೂಲಕವುಂಟಾದ ಅಜ್ಞಾನವು ಆಗಿರುತ್ತದೆಂತಲೂ, ವ ಸದ್ರಿ ಅಜ್ಞಾನದ ಮೂಲಕ ನಮ್ಮ ಹವ್ಯಕಶಿಷ್ಯವೃಂದದಲ್ಲಿ ಧರ್ಮ ಶೈಥಿಲ್ಯವು ಮತ್ತು ಅನೇಕತರದ ಅನವ್ಯಯಗಳನ್ನು ಮಾಡುವದಕ್ಕೆ ಅಸ್ಪದವು ಉಂಟಾಗಿರುತ್ತದೆಂತಲೂ ಸದ್ರಿ ಸಭೆಯುಪರಂತೆ ಶ್ರೀ ಸಂಸ್ಥಾನದ ಅಭಿಪ್ರಾಯವು ಸಹಾ ಇರುತ್ತದೆ.

೨. ಆದ್ದರಿಂದ ಸದ್ರಿ ಕಾರ್ಯಕ್ರಮ ಪತ್ರಿಕೆಯಲ್ಲಿ ನಮೂದಿಸಿದ ವಿಷಯಗಳಿಗೆ ಮಂಜೂರಿಕೊಟ್ಟು ಸದ್ರಿ ಅಭಿಪ್ರಾಯಕ್ಕನುಸರಿಸಿ ಸಂಸ್ಥಾನದ ಅಶೇಷ ಹವ್ಯಕ ಶಿಷ್ಯಜನರು ವರ್ತಿಸುವ ಬಗ್ಗೆ ಸದ್ರಿ ಕಾರ್ಯಕ್ರಮ ಪತ್ರಿಕೆಯ ಮಜಕೂರುಗಳನ್ನು ಛಾಪಿಪ್ರತಿಗಳದ್ವಾರ ಪ್ರಸಿದ್ಧ ಪಡಿಸಲಿಕ್ಕೆ ಅತ್ಯಾನಂದ ಪಡುತ್ತೇವೆ.

೪. ಸಭೆಯ ಅಭಿಪ್ರಾಯದಂತೆ ಹವ್ಯಕ ಶಿಷ್ಯಜನರೊಳಗಿನ ಅನವ್ಯಯದ ಬಾಬುಗಳನ್ನು ತೆಗೆದುಹಾಕಿ ಅದರಿಂದ ಉಳಿಯಬಹುದಾದ ದ್ರವ್ಯದೊಳಗಿನ ಕೆಲವು ಅಂಶವಾದರೂ ಸದ್ರಿ ಶಿಷ್ಯಜನರ ವಿದ್ಯಾಭಿವೃದ್ಧಿಗ ವಿನಿಯೋಗಿಸುವದು ಸ್ತುತ್ಯ ವ ಹಿತಕರವಾದದ್ದಿದ್ದು ಸಭೆಯ ಕಾರ್ಯಕ್ರಮ ಪತ್ರಿಕೆಯ ೧ ನೇ ವಿಷಯದ ಕುರಿತು ಸಭೆಯವರು ಅಭಿಪ್ರಾಯ ಪಟ್ಟಂತೆ ಎಲ್ಲಾ ಹವ್ಯಕ ಶಿಷ್ಯಜನರು ವರ್ತಿಸುವದು ಅವರ ಮುಖ್ಯ ಕರ್ತವ್ಯವೆಂತಾ ತಿಳಿದು ಅದರಂತೆ ವರ್ತಿಸತಕ್ಕದು.

೫ ಕಾರ್ಯಕ್ರಮ ಪತ್ರಿಕೆಯ ೨ ನೇ ವಿಷಯದ ಪೈಕಿ (ಅ) ಪೋಟವಿಷಯವಾದ ಕನ್ಯಾವಿಕ್ರಯ ಪ್ರತಿಬಂಧದ ಸಂಮಂಧದಲ್ಲಿ ಈ ಮೊದಲು ಅನೇಕಸಾರಿ ಅನೇಕತರದ ಉಪಾಯಗಳು ಮಾಡಲ್ಪಟ್ಟರೂ ಅವು ಯೋಗ್ಯರೀತಿ ಅಮಲಿನಲ್ಲಿ ತರಲ್ಪಡದೆ ಕನ್ಯಾ ವಿಕ್ರಯಗಳನ್ನು ಪ್ರತಿಬಂಧಮಾಡುವ ವಿಷಯದಲ್ಲಿ ಸೀಮೆಗಳಲ್ಲಿ ದುರ್ಲಕ್ಷ್ಯವೇ ಆಗುತ್ತಾ ಬಂದದ್ದು ತೋರುತ್ತದೆ. ಆದ್ದರಿಂದ ಹವ್ಯಕ ಶಿಷ್ಯ ಜನರು ಇನ್ನುಮುಂದಾದರೂ ಕಾರ್ಯಕ್ರಮ ಪತ್ರಿಕೆಯಲ್ಲಿ ನಮೂದಿಸಿದಂತೆ ವರ್ತಿಸುವಲ್ಲಿ ಜಾಗರೂಕರಾಗಿರತಕ್ಕದ್ದು. ಅಂಥವಿವಾಹಗಳು ನಡೆದದ್ದು ಸಂಸ್ಥಾನದ ಸಜನರಿಗೆ ಬಂದಲ್ಲಿ ಅವುಗಳನ್ನು ಸಾಗಿಸಿದ ವೈದಿಕರಿಗೆ, ವ, ಅವುಗಳನ್ನು ಮಾಡಿದ ವ ಮಾಡಲಿಕ್ಕೆ ಸಹಾಯ ಮಾಡಿದ ಬೇರೆ ಜನರಿಗೆ ಸಹಾ ಸಂಸ್ಥಾನದ ಅಧಿಕಾರಕ್ಕನುಸರಿಸಿ ತಕ್ಕ ಬಂದೋಬಸ್ತು ಮಾಡಲಾದೀತು.

ಸದರೀ ವಿಷಯದ (ಬ) ಪೋಟವಿಷಯವಾದ ಮಲಿಯಾಳ ಅತ್ತಕಡಿಂದ ಹೆಣ್ಣನ್ನು ಲಗ್ನಮಾಡಿಕೊಂಡು ಬರುವ ಕುರಿತು ಕಾರ್ಯಕ್ರಮ ಪತ್ರಿಕೆಯಲ್ಲಿ ನಮೂದಿಸಿದಂತೆ ವರ್ತಿಸತಕ್ಕದ್ದು ಅದರ ವಿರುದ್ಧ ನಡೆದಲ್ಲಿ ಆ ಬಗ್ಗೆ ಸಹಾ ತಕ್ಕಬಂದೋಬಸ್ತು ಮಾಡಲಾದೀತು.

ಸದರೀ ವಿಷಯದ (ಕ) ಪೋಟವಿಷಯದ ಕುರಿತು ವಿಚಾರಮಾಡಿ ನೋಡಲಾಗಿ ಶಿರ್ಸಿ ವಗೈರೆ ಶಹರಗಳಲ್ಲಿ ತಮ್ಮ ತಮ್ಮ ಕೆಲಸದ ದೆಸೆಯಿಂದ ಹೋಗುವ ಹವ್ಯಕ ಶಿಷ್ಯಜನರಿಗೆ ಭೋಜನೋಪಹಾರಗಳ ಸೋಯಿ ಆಗುವದು ಅವಶ್ಯವಿರುತ್ತದೆಂಬದು ಸಹಜವದೆ. ಪರಂತು ಅಂಥಲ್ಲಿ ಈಗ ಇರುವ ಭೋಜನೋಪಹಾರ ಸ್ಥಳಗಳಲ್ಲಿ ಕಾರ್ಯಕ್ರಮ ಪತ್ರಿಕೆಯಲ್ಲಿ ನಮೂದಿಸಿದಂತೆ ಸಂಶಯಾಸ್ಪದವಾದ ಧರ್ಮ ವಿರುದ್ಧ ಆಚರಣೆಗಳು ತೋರುತ್ತಿರುವದರಿಂದ ಅಂಥಲ್ಲಿ ಇನ್ನು ಮುಂದೆ ಈ ಸಂಸ್ಥಾನದ ಯಾವನೊಬ್ಬ ಹವ್ಯಕ ಶಿಷ್ಯನಾದರೂ ಭೋಜನೋಪಹಾರಾದಿ ವ್ಯವಹಾರಗಳನ್ನು ನಡಿಸಕೂಡದು. ಇಂಥ ಶಹರಗಳಿಗೆ ಹೋಗುವ ಹವ್ಯಕ ಶಿಷ್ಯಜನರ ಸಮ್ಮಂಥ ಧರ್ಮವಿರುದ್ಧ ಆಚರಣ ಘಟಿಸದಂತೆ ಯೋಗ್ಯರೀತಿ ಭೋಜನೋಪಹಾರ ಗೃಹಗಳನ್ನಿಡಲಿಕ್ಕೆ ಸಂಸ್ಥಾನದ ಅಭಿಪ್ರಾಯದಂತೆ ಕಬೂಲಮಾಡುವ ಜನರನ್ನು ನೋಡಿ ಅಂಥವರಿಗೆ ಆ ಪ್ರಕಾರ ಭೋಜನೋಪಹಾರ ಗೃಹಗಳನ್ನಿಡಲಿಕ್ಕೆ ಸಂಸ್ಥಾನದಿಂದ ನಿರೂಪ ಕೊಟ್ಟು ಭೋಜನೋಪಹಾರಾದಿಗಳ ಬಗ್ಗೆ ಯೋಗ್ಯವ್ಯವಸ್ಥೆ ಸಂಸ್ಥಾನದ ತರ್ಫೆನಿಂದ ಮಾಡಿಸತಕ್ಕದ್ದು ಇರುತ್ತದೆ.

ಆ ಪ್ರಕಾರ ಮಾಡಿದನಂತ್ರ ಸದ್ರಿ ಪ್ರಕಾರ ನಿರ್ದಿಷ್ಟ ಮಾಡಲ್ಪಟ್ಟ ಭೋಜನೋಪಹಾರ ಗೃಹಗಳಲ್ಲಿ ಮಾತ್ರ ಅಂಥ ವ್ಯವಹಾರ ನಡಿಸತಕ್ಕದ್ದು ಅಲ್ಲೀವರಿಗೆ ಈ ಸಂಸ್ಥಾನದ ಹವ್ಯಕಶಿಷ್ಯ ಜನರು ಮೇಲೆ ಬರೆದಂಥ ಸ್ಥಳಗಳಲ್ಲಿ ಭೋಜನೋಪಹಾರಾದಿ ವ್ಯವಹಾರಗಳನ್ನು ನಡಿಸಿದ್ದರಿಂದ ಉಂಟಾಗಬಹುದಾದ ಧರ್ಮವಿರುದ್ಧ ಆಚರಣೆಗಳು ಘಟಿಸದಂತೆ ಸ್ವತಂತ್ರ ರೀತಿಯಿಂದ ತಮ್ಮ ತಮ್ಮ ಸೋಯಿ ಮಾಡಿಕೊಳ್ಳತಕ್ಕದು. ಇದಕ್ಕೆ ವಿರುದ್ಧವಾಗಿ ಯಾವನೊಬ್ಬ ಶಿಷ್ಯನಾದರೂ ನಡೆದಲ್ಲಿ ಅವನ ಬಗ್ಗೆ ತಕ್ಕ ಬಂದೋಬಸ್ತು ಮಾಡಲಾದೀತು

೬. ಕಾರ್ಯ ಕ್ರಮ ಪತ್ರಿಕೆಯ ೩ನೇ ವಿಷಯದ ಸಂಮಂಧ ಅದರಲ್ಲಿ ಬರೆದಂತೆ ವರ್ತಿಸುವದು ಎಲ್ಲಾ ಹವ್ಯಕ ಶಿಷ್ಯಜನರಿಗೆ ಹಿತಕರವಾದ್ದರಿಂದ ಅದರಂತೆ ವರ್ತಿಸುವಲ್ಲಿ ಎಲ್ಲಾ ಹವ್ಯಕ ಶಿಷ್ಯ ಜನರು ದಕ್ಷರಾಗಿರತಕ್ಕದ್ದು. ದೇಶಾವರದ ದೆಸೆಯಿಂದ ಎಂತ ಬರುವ ಜನರ ಪಾತ್ರಾಪಾತ್ರತೆಯ ಕುರಿತು ಅಂಥವರು ಆ ಪ್ರಕಾರ ದೇಶಾವರ ಹೊಂದಲಿಕ್ಕೆ ಪಾತ್ರರಿರುತ್ತಾರೆಂಬ ಬಗ್ಗೆ ಈ ಸಂಸ್ಥಾನದ ಯೋಗ್ಯ ದಾಖಲೆ ತೋರಿಸಿದ ಶಿವಾಯ ಅಂಥವರಿಗೆ ದೇಶಾವರ ಕೊಡತಕ್ಕದ್ದಿಲ್ಲ ಇಂಥ ಜನರಿಗೆ ಕೊಡತಕ್ಕ ದೇಶಾವರ ರಕಮಿನ ಸಂಮಂಧ ಮರದ ನಿರ್ಬಂಧವಿಲ್ಲ ಅಡಿಕೆ ವಗೈರೆ ಹಂಗಾಮಿ ವೇಳೆಯಲ್ಲಿ ಅಡಿಕೆ ವಗೈರೆ ಸಂಭಾವನೆ ಮಾಡಲಿಕ್ಕೆ ಎಂತ ಬರತಕ್ಕವರು ಬಹುತೇಕ ನಿರುದ್ಯೋಗಿಗಳು ವ ಅಪಾತ್ರರು ಇರುವದು ಕಂಡುಬರುವದರಿಂದ ಅಂಥವರಿಗೆ ಅಡಿಕೆ ವಗೈರ ಸಂಭಾವನೆ ಕೊಡುವದು ಯೋಗ್ಯತೋರುವದಿಲ್ಲಾದ್ದರಿಂದ ಅಂಥವರಿಗೆ ಅಂಥ ಸಂಭಾವನೆಯನ್ನು ಯಾರೂ ಕೊಡಬಾರದು. ಶಿವಾಯ ನಮ್ಮ ಹವ್ಯಕ ಶಿಷ್ಯಜನರಲ್ಲಿ ಕೆಲವರು ಏನೂ ಆಸ್ತಿವೃತ್ತಿ ಇಲ್ಲದೆ ಅಥವಾ ತಮ್ಮ ಉಪಜೀವನದ ದೆಸೆಯಿಂದ ಏನೂ ಉದ್ಯೋಗ ಸಹಾ ಮಾಡದೆ ಫಕ್ತ ಮನಬಂದಂತೆ ನಿರುದ್ಯೋಗದಿಂದ ಅಲ್ಲಿ ಇಲ್ಲಿ ಉಳಿದು ಕಾಲಕ್ಷೇಪವಮಾಡುತ್ತಾ ಇದ್ದು ಇದರಿಂದ ಎಷ್ಟೋ ಧರ್ಮಸಂಮಂಧಿ ಅಪರಾಧಗಳು ಘಟಿಸುವದು ಸಂಸ್ಥಾನದ ದೃಷ್ಟ್ಯೋತ್ಪತ್ತಿಗೆ ಬಂದಿರುವದರಿಂದ ಇಂಥ ಜನರಿಗೆ

ಯಾವದೊಂದೂ ತರದಿಂದ ಆಶ್ರಯ ಕೊಡತಕ್ಕದ್ದಿಲ್ಲ. ಇಂಥ ಜನರು ಇದ್ದ ಗ್ರಾಮ ವ ಸೀಮೆಯವರು ಅಂಥ ಜನರ ಒಂದು ಲಿಷ್ಟ್ಸ್ ಮಾಡಿ ಸಂಸ್ಥಾನಕ್ಕೆ ಕಳುಹಿಸತಕ್ಕದ್ದು.

ಈ ಮೇಲಿನ ಮಜಕೂರಿನ ಮೇಲಿಂದ ಸಂಸ್ಥಾನದವರು ದಾನ ಧರ್ಮದ ವಿಷಯದಲ್ಲಿ ಶಿಷ್ಯವರ್ಗದಲ್ಲಿ ಅನಾದರ ಬುದ್ಧಿಯನ್ನುಂಟುಮಾಡಲಿಕ್ಕೆ ಪ್ರವರ್ತರಾಗಿರುತ್ತಾರೆಂದು ತಿಳುಕೊಳ್ಳತಕ್ಕದ್ದಲ್ಲ. ಫಕ್ತ ಶಿಷ್ಯವರ್ಗದಲ್ಲಿ ಅಪಾತ್ರದಾನದಿಂದುಂಟಾಗುವ ಅನಿಷ್ಟಗಳನ್ನು ಲಕ್ಷದಲ್ಲಿ ತಂದು ಅಪ್ರಕಾರ ಅಪಾತ್ರದಲ್ಲಿ ದಾನಮಾಡುವದನ್ನು ಕುಂದಿಸಿ ವಿಚಾರ ಪೂರ್ವಕವಾಗಿ ಸತ್ಪಾತ್ರದಲ್ಲಿ ದಾನ ಧರ್ಮ ಮಾಡುವ ಬಗ್ಗೆ ಉತ್ತೇಜನ ಕೊಡಬೇಕೆಂಬದೊಂದೇ ಉದ್ದೇಶವಿರುತ್ತದೆಂದು ತಿಳಿಯತಕ್ಕದ್ದು.

ಪೂರ್ವದಲ್ಲಿ ಶುಭಶೋಭನಾದಿ ಕಾರ್ಯಗಳಲ್ಲಿ ಆಯಾಯ ಗ್ರಾಮದ ಶಿಷ್ಯ ಜನರು ಸಹಕಾರಿ ತತ್ವದ ಮೇಲೆ ಒಬ್ಬರಿಗೊಬ್ಬರು ನೆರವಾಗಿ ಕಾರ್ಯವನ್ನು ಪೂರೈಸಿಕೊಳ್ಳುತ್ತಿದ್ದ ಹಿತಕರವಾದ ಪದ್ಧತಿಯನ್ನು ಬಿಟ್ಟು ಇಚಿಕಡಿಗೆ ಅಂಥ ಕಾರ್ಯಗಳಲ್ಲಿ ಸಂಬಳಕೊಟ್ಟು ಜನರನ್ನು ಇಟ್ಟುಕೊಳ್ಳುವದು ಅನವ್ಯಯಕ್ಕೆ ಕಾರಣವಾಗಿರುವದರಿಂದ ಅದನ್ನು ಬಿಟ್ಟು ಪೂರ್ವ ಪದ್ಧತಿ ಪ್ರಕಾರ ಸಹಕಾರಿ ತತ್ವದ ಮೇಲೆ ಆಯಾಯ ಗ್ರಾಮದ ಹವ್ಯಕ ಶಿಷ್ಯ ಜನರು ತಮ್ಮತಮ್ಮೊಳಗೆ ಒಬ್ಬರಿಗೊಬ್ಬರು ನೆರವಾಗಿ ಅಂಥ ಕಾರ್ಯವನ್ನು ಪೂರೈಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

ಈ ಎಲ್ಲಾ ಮಜಕೂರುಗಳನ್ನು ನಮ್ಮ ಹವ್ಯಕ ಶಿಷ್ಯಜನರು ಯೋಗ್ಯರೀತಿ ಮನನಮಾಡಿಕೊಂಡು ಅದರಂತೆ ತಮ್ಮ ವರ್ತನವನ್ನು ಇಟ್ಟ ಪಕ್ಷಕ್ಕೆ ಅವರಿಗೆ ಅನೇಕತರದ ಇಹಪರ ಸೌಖ್ಯ ಉಂಟಾದೀತಾದ್ದರಿಂದ ಅದರಂತೆ ಸಂಸ್ಥಾನದ ಪ್ರತಿ ಒಬ್ಬ ಶಿಷ್ಯನು ತಾನು ತಾನು ಸ್ವತಃ ವರ್ತಿಸುವದಲ್ಲದೆ ತನ್ನಿಂದಾದಷ್ಟು ಪ್ರಯತ್ನಪಟ್ಟು ಬೇರೆಯವರ ಮನವಲಿಸುತ್ತಿರುವಲ್ಲಿ ದಕ್ಷನಾಗಿರತಕ್ಕದ್ದು.

ನಮ್ಮ ನಂತರ ಈ ಸಂಸ್ಥಾನದ ಪೀಠಕ್ಕೆ ಅಧಿಕಾರಿಯಾಗುವ ಬಗ್ಗೆ ಯೋಗ್ಯ ಶಿಷ್ಯನನ್ನು ಮಾಡಿಕೊಳ್ಳುವ ಆಲೋಚನೆ ಇರುವದರಿಂದ ಆ ಪ್ರಕಾರ ಶಿಷ್ಯನನ್ನು ಮಾಡಿಕೊಳ್ಳಲಿಕ್ಕೆ ಯೋಗ್ಯನಾದ ಬ್ರಹ್ಮಚಾರಿಯನ್ನು ಕೊಡಲಿಕ್ಕೆ ಕಬೂಲ ಇರುವವರು ಶ್ರೀ ಸಂಸ್ಥಾನಕ್ಕೆ ಬಿನ್ನೈಸಿಕೊಳ್ಳತಕ್ಕದ್ದು. ನಂತರ ಆಸಮ್ಮಂಧ ಅಗತ್ಯವಿರುವ ಮುಂದಿನ ವಿಚಾರ ಮಾಡತಕ್ಕದ್ದಿರುತ್ತದೆ. ಈ ಬಗ್ಗೆ ಸಂಸ್ಥಾನದ ಸಾಭಿಮಾನವುಳ್ಳ ಸೂಜ್ಞ ಶಿಷ್ಯರಿಗೆ ವಿಸ್ತಾರ ನಿರೂಪಿಸುವದೇನು?

इति नारायण स्मृतिः

ಸಭೆಯ ಕಾರ್ಯ ಕ್ರಮಪತ್ರಿಕೆಯ ಮಜಕೂರು ಈ ಕೆಳಗೆ ವಿವರಿಸಿ ಅದೆ.

ಶ್ರೀ ಶಾಲಿವಾಹನಶಕ ವರುಷ ೧೮೩೬ ನೇ ಆನಂದ ನಾಮ ಸಂವತ್ಸರದ ಚೈತ್ರ ಶುದ್ಧ ೧೦ ಯಲ್ಲು ಈ ಸಂಸ್ಥಾನದ ಕೆಲವು ಜನ ಶಿಷ್ಯರು ಶ್ರೀ ಮಠದವರ ಸಮ್ಮತಿಯಿಂದ ಹೊರಡಿಸಿದ ನಿಮಂತ್ರಣ ಪತ್ರಿಕೆಯ ಪ್ರಕಾರ ಇದೇ ವೈಶಾಖ ವದ್ಯ ೭ ಯು ದಿವಸ ಸಂಸ್ಥಾನದ ಶಿಷ್ಯ ಜನರು ಕೂಡತಕ್ಕ ಮುದ್ದತ ಇದ್ದಾಗ್ಯೂ ಆ ದಿವಸ ಆಗದೀ ಸ್ವಲ್ಪ ಜನರು ತಿವ್ವಾ ವಿಶೇಷ ಜನರು ಕೂಡದೆ ಇದ್ದದರಿಂದ ಮರು ದಿವಸ ಅಂದರೆ ೮ ಯು ರವಿವಾರ ದಿವಸ ಮತ್ತೂ ವಿಷ್ಟೋ ಜನ ಶಿಷ್ಯರು ಬಂದು ಇನ್ನೂ ಹೆಚ್ಚಿಗೆ ಜನರು ಕೂಡ್ಯಾರೆಂಬ ಸಂಭವ ತೋರದೆ ಇರುವದರಿಂದ ಈಗ ಬಂದಷ್ಟು ಜನರು ಕೂಡಿ ನಿಮಂತ್ರಣ ಪತ್ರಿಕೆಯಲ್ಲಿ ಬರೆದ ವಿಷಯಗಳ ಕುರಿತು ವಿಚಾರ ಮಾಡಲಿಕ್ಕೆ ಉಪಕ್ರಮಿಸಿತು.

ಹಾಜರಿದ್ದ ಜನರು.

೧ ಎಲ್ಲಾಪೂರ ಸೀಮೆ.

೧ ಲಕ್ಷ್ಮೀನಾರಾಯಣ ಗಣಪಭಟ್ಟ ಗುಂಡಕಲ್ಲ.

೨ ಹಳೇಮನೆ ತಿಮ್ಮಣ್ಣ ಶಿವಯ್ಯ ಬಳಗಾರ.

೩ ಗಣೇಶ ನರಸಿಂಹಭಟ್ಟ ಕಾವಡಿಕೇರಿ.

೪ ಶಿವರಾಮ ಕೋನೇರಭಟ್ಟ ಕುಂಬತ್ತಿ.

೨ ಕುಳೇನಾಡ ಸೀಮೆ.

೫ ರಾಮಯ್ಯ ವೆಂಕಪ್ಪ ಹೆಬ್ಬಾರ ಹಳವಳ್ಳಿ.

೬ ರಾಮಚಂದ್ರ ಕೇಶಣ್ಣ ಗಾವಕಾರ. ಗೇರಾಳ ಮಲವಳ್ಳಿ.

೭ ನಾರಣಭಟ್ಟ ಕೃಷ್ಣಭಟ್ಟ ಮುಂಡಗೋಡಿ.

೩ ಶಿರಸಿ ಸೀಮೆ.

೮ ಉಮಾಮಹೇಶ್ವರ ಗಣಪಯ್ಯ ಹೆಗಡೆ ಅಲೇಸರು.

೯ ನಾರಾಯಣ ಗಣಪಯ್ಯ ಹೆಗಡೆ ಸಣ್ಣಳ್ಳಿ.

೧೦ ಸುಬ್ರಾಯ ಸುಬ್ಬಯ್ಯ ಹೆಗಡೆ ಹುಡ್ಲಮನೆ.

೧೧ ನಾರಾಯಣ ದೇವಪ್ಪ ಹೆಗಡೆ ಕೋಪೇಸರು.

೧೨ ರಾಮಕೃಷ್ಣ ಶಂಕ್ರಪ್ಪ ಹೆಗಡೆ ಬಳಗಂಡಿ.

೧೩ ರಾಮಕೃಷ್ಣ ನರಸಿಂಹ ಹೆಗಡೆ ಅಪ್ರಿಮನೆ.

೧೪ ಅನಂತ ಸಂಬಯ್ಯ ಹೆಗಡೆ ಬೆಳೆಕೇರಿ.

೧೫ ಗಣಪಯ್ಯ ಗಿಡ್ಡಯ್ಯ ಹೆಗಡೆ, ಬೆಳ್ಳಿಕೇರಿ.
೧೬ ಕುಪ್ಪಣ್ಣ ನರಸಿಂಹ ಹೆಗಡೆ ಬಾಳೆಗದ್ದೆ.
೧೭ ತಿಮ್ಮಣ್ಣ ಸುಬ್ರಾಯ ಹೆಗಡೆ ಕುಮ್ರಿಮನೆ.

೪ ಶಿವಳ್ಳಿ ಶೀಮೆ.

೧೮ ನಾರಣಪ್ಪ ಶಿವಯ್ಯ ಹೆಗಡೆ ಮುಂಡಿಗೆಮನೆ.
೧೯ ಮಂಜಪ್ಪ ದೇವಪ್ಪ ಹೆಗಡೆ ಮಕ್ಕಳತಾಯಿಮನೆ
೨೦ ಸುಬ್ರಾಯ ಸುಬ್ಬಯ್ಯ ಹೆಗಡೆ ಓಣಿಗದ್ದೆ.
೨೧ ಗಣಪಯ್ಯ ವೆಂಕಪ್ಪ ಹೊನ್ನೆಕಟ್ಟು.
೨೨ ವೆಂಕಪ್ಪ ಸುಬ್ಬಯ್ಯ ಬೆಟ್ಟಗ್ಣೆಮನೆ.

೫ ಕೇಸಲವಾಡ ಶೀಮೆ.

೨೩ ಗೋವಿಂದ ನರಸಯ್ಯ ಹೆಗಡೆ. ಓಣೀಕೇರಿ.
೨೪ ಸುಬ್ಬಯ್ಯ ಬಡಪ್ಪ ಓಣೀಕೇರಿ.

೬ ತೋಟ ಶೀಮೆ.

೨೫ ಗಣಪತಿ ನಾರಾಯಣಭಟ್ಟ ಅಗಸಾಲ.
೨೬ ವೆಂಕಪ್ಪ ಸುಬ್ಬಯ್ಯ ಹೆಗಡೆ ಶಿರಗೋಡ.
೨೭ ವೆಂಕಟ್ರಮಣ ಈಶ್ರಪ್ಪ ಅಜ್ಜಿ.

೭ ಇಸಳೂರ ಶೀಮೆ.

೨೮ ಕೃಷ್ಣಭಟ್ಟಾ ಶಂಭಟ್ಟ ಬಿಸಲಕೊಪ್ಪ.

೮ ಬದನಗೋಡ ಶೀಮೆ.

೨೯ ಸುಬ್ಬಾಭಟ್ಟ ಕೃಷ್ಣಭಟ್ಟ ಪಟೇಲ ಸುಗಾವಿ.
೩೦ ನಂಜುಂಡ ಶಿವನಯ್ಯ ಕೆರೆಕೊಪ್ಪ.

೯ ಭತಳವಳ್ಳಿ ಶೀಮೆ.

೩೧ ನರಸಿಂಹ ನರಸಪ್ಪ ಹೆಗಡೆ ಹಿತ್ಲಳ್ಳಿ.
೩೨ ಗಣಪತಿ ಪರಂಭಟ್ಟ ಹಿತ್ಲಳ್ಳಿ.
೩೩ ಕೃಷ್ಣಪ್ಪ ತಿಮ್ಮಯ್ಯ ಹೆಗಡೆ ಜಾರೇಹಳ್ಳಿ.
೩೪ ನಾರಣಪ್ಪ ಹೆಗಡೆ ಕುಂದ್ರಿಗೆ.
೩೫ ಗಣಪಯ್ಯ ಹೆಗಡೆ ಕನೇನಳ್ಳಿ.
೩೬ ರಾಮಕೃಷ್ಣ ಹೆಗಡೆ ಮಾಳಕೊಪ್ಪ

೧೦ ಕರೂರ ಶೀಮೆ.

೩೭ ವಿಶ್ವೇಶ್ವರ ಗಣೇಶ ಹೆಗಡೆ ವಕೀಲ ನೀರ್ಲಪದ.

೧ ನೇ ವಿಷಯ:— ನಮ್ಮ ಜನರ ವಿದ್ಯಾಭಿವೃದ್ಧಿ ಬಗ್ಗೆ ಅಗತ್ಯ ತೋರುವ ಏರ್ಪಾಡುಗಳು ಮಾಡುವದರ ಕುರಿತು.

೧ ನಮ್ಮ ಜನರು ಹೀನಸ್ಥಿತಿಗೆ ಬರಲಿಕ್ಕೆ ಮುಖ್ಯ ಕಾರಣವು ನಮ್ಮ ಜನರ ಅಜ್ಞಾನವೆಂತ ಕಂಡುಬಂದು ಅದನ್ನು ದೂರ ಮಾಡಲಿಕ್ಕೆ ಸಾಧನವಾದ ವಿದ್ಯೆಯನ್ನು ಅಭಿವೃದ್ಧಿಗೊಳಿಸುವದು ಅವಶ್ಯವೆಂತ ಅಭಿಪ್ರಾಯ ಪಡೋಣವಾಯಿತು.

೨ ಸದರಿ ಪ್ರಕಾರ ವಿದ್ಯಾಭಿವೃದ್ಧಿ ಮಾಡುವ ಬಗ್ಗೆ ದ್ರವ್ಯದ ಸಹಾಯವು ಅಗತ್ಯವಿರುತ್ತದೆಂತ ತೋರಿದ್ದರಿಂದ ಆ ಪ್ರಕಾರ ದ್ರವ್ಯದ ಅನುಕೂಲತೆ ಮಾಡುವ ಬಗ್ಗೆ "ಹವ್ಯಕ ವಿದ್ಯಾಭಿವೃದ್ಧಿ ಫಂಡು" ಎಂತ ಒಂದು ಫಂಡು ಮಾಡಬೇಕೆಂತ ಅಭಿಪ್ರಾಯ ಪಟ್ಟಿತು.

೩ ಸದರ ಫಂಡು ಕೂಡಿಸುವ ಬಗ್ಗೆ ಈ ಕೆಳಗೆ ಬರೆದ ವ್ಯವಸ್ಥೆಯನ್ನು ಮಾಡತಕ್ಕದ್ದು.

(ಅ) ಈ ಮಠದ ಹವ್ಯಕ ಶಿಷ್ಯವರ್ಗದವರು ತಾವು ಕೊಡುವ ಸರಕಾರ ತೀರ್ವೆಯ ಮೇಲಿಂದ ರೂಪಾಯಿ ೧ ಕ್ಕೆ ನಾಲ್ಕು ಆಣೆಯ ಪ್ರಕಾರ ಆಗಬಹುದಾದ ರಕಮು ಈ ಫಂಡಿನ ಸಮ್ಮಂಧ ಕೊಡಬೇಕು ಜಮೀನ ಉತ್ಪನ್ನ ಮತ್ತು ಇತರೇ ಉತ್ಪನ್ನ ವಿರುವ ಖಪತ್ತದಾರ ಮನುಷ್ಯರಿಗೆ ಈ ಪ್ರಮಾಣದಕಿಂತಲೂ ಜಾಸ್ತಿ ರಕಂ ಕೊಡುವ ಬಗ್ಗೆ ಮನವಲಿಸತಕ್ಕದ್ದು

ಜಮೀನಜಾಬ ಇಲ್ಲದೆ ಬೇರೇ ಅನಿಯಮಿತ ಉತ್ಪನ್ನವಿರುವವರು ಅವರ ಯೋಗ್ಯತಾನುಸಾರ ಈ ಫಂಡಿಗೆ ಹಣ ಕೊಡತಕ್ಕದ್ದು.

ಜಮೀನಜಾಬ ಇಲ್ಲದೆ ನಿಯಮಿತ ಉತ್ಪನ್ನವಿದ್ದವರು ತಮ್ಮ ಒಂದು ತಿಂಗಳ ಉತ್ಪನ್ನವನ್ನು ಕೊಡತಕ್ಕದ್ದು.

ಈ (ಅ) ಕಲಮಿನಲ್ಲಿ ತೋರಿಸಿದ ರಕಂ ವರ್ಷಂಪ್ರತಿ ಕೊಡತಕ್ಕದ್ದಲ್ಲ.

(ಬ) ಸದರಿ ಜನರಲ್ಲಿ ಆಗತಕ್ಕ ಶುಭಶೋಭನಾದಿ ಕಾರ್ಯಗಳ ವೇಳ್ಯ ಲಗ್ನದಲ್ಲಿ ವರನ ಮನೆಯವರು ೪-೦-೦ ನಾಲ್ಕು ರೂಪಾಯಿಗಳ ಪ್ರಕಾರ ವಧುವಿನ ಮನೆಯವರು ೨-೦-೦ ಎರಡು ರೂಪಾಯಿ ಪ್ರಕಾರ ಉಪನಯನದ ವೇಳ್ಯ ೧-೦-೦ ಒಂದು ರೂಪಾಯಿದಂತೆ, ಚೌಲದ ವೇಳ್ಯ ೦-೮-೦ ಎಂಟು ಆಣೆಯಂತೆ ರುತುಶಾಂತಿಯ ವೇಳ್ಯ ೧-೦-೦ ಒಂದು ರೂಪಾಯಿದಂತೆ ಈ ಪ್ರಕಾರ ಆಯಾಯ ಮನೆಯವರು ಈ ಫಂಡಿನ ಸಮ್ಮಂಧ ಕೊಡತಕ್ಕದ್ದು

ಈ (ಬ) ಕಲಂದಲ್ಲಿ ಕಾಣಿಸಿದ ರಕಮು ಆಯಾಯ ಕಾರ್ಯವಾದರೆ ಮಾತ್ರ ಕೊಡತಕ್ಕದ್ದು

(ಕ) ಈ ಸಂಸ್ಥಾನದ ಹವ್ಯಕ ಶಿಷ್ಯವರ್ಗದ ಪ್ರತಿ ಒಂದು ಕುಟುಂಬದವರು ತಮ್ಮ ಕುಟುಂಬದಲ್ಲಿರುವ ಪ್ರತಿ

ಒಬ್ಬ ಮನುಷ್ಯನಿಗೆ (ಅಂದರೆ ಗಂಡಸರು, ಹೆಂಗಸರು, ಹುಡಗರು ಗಂಡುಹೆಣ್ಣು ಸಹ) ತಲೆಗೆ ಒಂದು ಆಣೆ ಪ್ರಕಾರ ಒಟ್ಟು ಆಗಬಹುದಾದ ರಕಂ ಪ್ರತಿ ವರುಷ ಈ ಫಂಡಿಗೆ ಕೊಡತಕ್ಕದ್ದು.

ಸದರೀ ಪ್ರಕಾರ ಫಂಡಿನ ಬಗ್ಗೆ ಹಣ ಒಟ್ಟು ಮಾಡುವ ಬಗ್ಗೆ ಅಗತ್ಯವಿರುವ ಕಮಿಟಿ ನೇಮಿಸುವ, ಸದರ ಫಂಡನ್ನು ಕಾದಿಡುವ ವ ಅದನ್ನು ವಿದ್ಯಾಭಿವೃದ್ಧಿ ಕೆಲಸಕ್ಕೆ ವಿನಿಯೋಗ ಮಾಡುವ ವಗೈರೆ ವ್ಯವಸ್ಥೆಗಳ ಕುರಿತು ಇನ್ನೊಮ್ಮೆ ನಮ್ಮ ಜನರನ್ನು ಕೂಡಿಸಿ ವಿಚಾರ ಮಾಡತಕ್ಕದ್ದು.

೨ ನೇ ವಿಷಯ.— ನಮ್ಮ ಜನರ ಧರ್ಮ ಶೈಥಿಲ್ಯದ ಕುರಿತು.

೧ ಈ ವಿಷಯವು ಬಹಳ ವ್ಯಾಪಕವಾದದ್ದಿದ್ದು ಇದರ ವಿಚಾರ ಎಲ್ಲ ಬಾಜುವಿನಿಂದಲೂ ಪ್ರಕೃತಕ್ಕೆ ಮಾಡುವದು ಅಸಾಧ್ಯ ಕಂಡು ಅವೈಕಿ ತುರ್ತ ಸೂಚಿಸಲ್ಪಟ್ಟ ಮೂರು ಸಂಗತಿಗಳ ಬಗ್ಗೆ ಮಾತ್ರ ವಿಚಾರ ಮಾಡಲಾಯಿತು.

(ಅ) ಕನ್ಯಾ ವಿಕ್ರಯ ಬಂದ ಮಾಡುವದು.

ಈ ಬಗ್ಗೆ ಮೊದಲು ಅನೇಕ ಪ್ರಯತ್ನಗಳು ನಡೆದ ಪಕ್ಷಕ್ಕೂ ಈ ಉದ್ದೇಶ ನೆರವೇರದೆ ಇದ್ದದರಿಂದ ಸದರ ಉದ್ದೇಶವನ್ನು ನೆರವೇರಿಸುವ ಬಗ್ಗೆ ಕೆಳಗೆ ನಮೂದಿಸಿದ ಉಪಾಯ ಮಾಡಿ ನೋಡಬೇಕೆಂತ ಅಭಿಪ್ರಾಯವಹೋಣವಾಯಿತು.

ಕನ್ಯೆಯ ಬಗ್ಗೆ ಕ್ರಯ ತೆಗೆದುಕೊಂಡು ಮಾಡುವ ವಿವಾಹಗಳು ಆಯಾಯ ಗ್ರಾಮ ವ ಶೀಮೆಯ ಪ್ರಮುಖ ವೈದೀಕ ಗೃಹಸ್ಥರಿಗೆ ಮತ್ತು ಸದರ ವಿವಾಹ ಮಾಡುವ ಮನೆಯ ಪುರೋಹಿತನಿಗೆ ಲಗ್ನದ ಪೂರ್ವದಲ್ಲಿ ತಿಳುವಳಿಕೆಗೆ ಬಂದೇ ಬರುತ್ತದೆಂಬದು ಅನುಭವ ಸಿದ್ಧವಾದ ಮಾತು ಅದೆ. ಆದದರಿಂದ ಇಂಥ ವಿವಾಹಗಳು ಆಗದಂತೆ ಮಾಡುವದು ಆಯಾಯ ಶೀಮೆಯ ಮತ್ತು ಗಾಮ್ವದ ಪ್ರಮುಖ ವೈದೀಕ ಗೃಹಸ್ಥರಿಗೆ ಮತ್ತು ಸದರ ವಿವಾಹ ಮಾಡುವ ಮನುಷ್ಯನ ಪುರೋಹಿತರಿಗೆ ಸುಸಾಧ್ಯವಾದ ಕೆಲಸವಿದುತ್ತದ. ಸದರ ಜನರು ಇಂಥ ಕನ್ಯಾ ವಿಕ್ರಯ ಮಾಡುವ ಮನುಷ್ಯನಲ್ಲಿ ಸದರ ಲಗ್ನದಲ್ಲಿ ಹೋಗಿ ಯಾವ ತರದಿಂದಲೂ ಸಹಾಯ ಮಾಡುವದು ವೈದೀಕರು ಅಂಥ ವಿವಾಹ ಸಾಗಿಸಲಿಕ್ಕೆ ಹೋಗುವದು ದೃಢ ನಿಶ್ಚಯದಿಂದ ಬಂದ ಮಾಡತಕ್ಕದ್ದು. ಸದರ ಲಗ್ನ ಸಾಗಿಸಲಿಕ್ಕೆ ಹೋಗುವ ವೈದೀಕನಿಗೆ ಸಂಸ್ಥಾನದವರು ತಮ್ಮ ಅಧಿಕಾರಕ್ಕನುಸರಿಸಿ ಬಂದೋಬಸ್ತು ಮಾಡುವಂತೆ ಶ್ರೀ ಸಂಸ್ಥಾನದವರಿಗೆ ಬಿನ್ನೈಸಿಕೊಳ್ಳತಕ್ಕದ್ದೆಂತಾ ಅಭಿಪ್ರಾಯ ಪಟ್ಟು ಅಪ್ರಕಾರ ಬಿನ್ನೈಸಿಕೊಳ್ಳಲಾಯಿತು.

(ಬ) ನಮ್ಮ ಜನರಲ್ಲಿ ಎಷ್ಟೋ ಜನರು ಮಳಿಯಾಳ ಕಡೆಯಿಂದ ವಿಜಾತಿಯ ಹೆಣ್ಣನ್ನು ತಿಳಿದು ಯಾ ತಿಳಿಯದೆ ಲಗ್ನ ಮಾಡಿಕೊಂಡು ಬರುವದು ದೃಷ್ಟ್ಯೋತ್ಪತ್ತಿಗೆ ಬಂದಿರುವದರಿಂದ ಇನ್ನು ಮುಂದೆ ಯಾವನೊಬ್ಬನು ಅಪ್ರಕಾರ ಮಳಿಯಾಳ ಉತ್ತರದಿಂದ ಹುಡುಗಿಯರನ್ನು ಲಗ್ನ ಮಾಡಿಕೊಂಡು ಬರುವದು ಬಂದ ಮಾಡತಕ್ಕದ್ದು. ಯಾವನಾದರೂ ಅಪ್ರಕಾರ ಮಾಡಿಕೊಂಡು ಬಂದ ಪಕ್ಷದಲ್ಲಿ ಅಂಥವನನ್ನು ಒಂದು ವರುಷದವರೆಗೆ ಬೇರೇ ವ್ಯಕ್ತಿಗಳೊಳಗೆ ಸಂಸರ್ಗವಾಗದಂತೆ ಅಮಾನತ ಇಡತಕ್ಕದ್ದು. ಸದರ ಅವಧಿಯಲ್ಲಿ ಆತನು ಸದರೀ ಹೆಣ್ಣು ನಮ್ಮ ಜಾತಿಯದಿದ್ದು ನಮ್ಮ ಜನರಿಗೆ ಲಗ್ನ ಮಾಡಿಕೊಳ್ಳಲಿಕ್ಕೆ ಯೋಗ್ಯಳಾದವಳೆಂಬ ಬಗ್ಗೆ ಸಂಸ್ಥಾನಕ್ಕೆ ಯೋಗ್ಯ ರೀತಿಯಿಂದ ಖಾತ್ರಿ ಮಾಡಿ ಕೊಡತಕ್ಕದ್ದು. ಅಪ್ರಕಾರ ಆತನು ಸದರ ಅವಧಿಯಲ್ಲಿ ಸಂಸ್ಥಾನಕ್ಕೆ ಖಾತ್ರಿಮಾಡಿ ಕೊಡಲಿಕ್ಕೆ ತಪ್ಪಿದಲ್ಲಿ ಆತನು ಹೆಣ್ಣು ತ್ಯಾಜ್ಯಮಾಡಿ ಉಕ್ತ ಪ್ರಾಯಶ್ಚಿತ್ತ ಪಡಿಯತಕ್ಕದ್ದು.

(ಕ) ಹಿರಿ ವಗೈರ ಬಾಜಾರಗಳಲ್ಲಿ ಇರತಕ್ಕ ಭೋಜನದ ಉಪಹಾರ ಗೃಹಗಳ ಸೈಕಿ ಎಷ್ಟೋ ಕಡೆಯಲ್ಲಿ ಸ್ಪರ್ಶಾಸ್ಪರ್ಶ ವಗೈರೆ ಸಂಗತಿಗಳಲ್ಲಿ ಧರ್ಮ ವಿರುದ್ಧವಾದ ಸಂಶಯಾಸ್ಪದ ರೀತಿಗೆ ನಡಿಸುತ್ತಾ ಇರುವದೆಂದು ಬರುತ್ತಿರುವದರಿಂದ ಅಂಥಲ್ಲಿ ನಮ್ಮ ಜನರು ಆಹಾರ ಉಪಹಾರಗಳ ನಡಿಸುವದು ಧರ್ಮ ವಿರುದ್ಧವಾಗುವ ಕಾರಣ ಅಂಥಲ್ಲಿ ನಮ್ಮ ಜನರು ವ್ಯವಹಾರಗಳನ್ನು ನಡಿಸದಂತೆ ಜಾಗರೂಕರಾಗಿರತಕ್ಕದ್ದು. ಇಂಥವರಲ್ಲಿ ಇಂಥ ವ್ಯವಹಾರಗಳನ್ನು ನಡಿಸುವ ಜನರ ವಿಷಯವಾಗಿ ಧರ್ಮ ಪ್ರತಿಪಾಲನಾಧಿಕಾರವುಳ್ಳ ಸಂಸ್ಥಾನದವರು ಯೋಗ್ಯ ಬಂದೋಬಸ್ತು ಇಡುವ ಕುರಿತು ಬಿನ್ನೈಸಿಕೊಳ್ಳತಕ್ಕದ್ದೆಂತ ಅಭಿಪ್ರಾಯ ಪಟ್ಟು ಆ ರೀತಿ ಸಂಸ್ಥಾನಕ್ಕೆ ಬಿನ್ನೈಸಿಕೊಳ್ಳಲಾಯಿತು.

೩ ನೇ ವಿಷಯ:— ನಮ್ಮ ಜನರೊಳಗಿನ ಅನಾವಶ್ಯಕ ವ ಅವಿಚಾರದ ವ್ಯಯಾದಿಗಳವಳವುಗಳ ಪರಿಹಾರದ ಕುರಿತು.

ಸದರ ವಿಷಯದ ಪೈಕಿ ಮುಖ್ಯವಾದ ಕೆಲವು ಬಾಬಿನ ಸಮ್ಮಂಧ ಮಾತ್ರ ವಿಚಾರ ಮಾಡಿ ಅವುಗಳಿಗೆ ಉತ್ತೇಜನ ಸಿಗದಂತೆ ಪ್ರಯತ್ನ ಮಾಡುತ್ತಿರಬೇಕೆಂಬ ಅಭಿಪ್ರಾಯ ಪಡಲಾಯಿತು.

(ಅ) ಕೆಲವು ಕಡೆಯಲ್ಲಿ ಸಿಂಹ ತಿಂಗಳಲ್ಲಿ ಸಂಬಳ ಕೊಟ್ಟು ಅನ್ಯ ಜನರ ಕಡೆಯಿಂದ ದೇವಪೂಜಾ ಮಾಡಿಸುತ್ತಾ ಇರುವದರಿಂದ ಆ ಮೂಲಕ ನಮ್ಮ ಜನರಲ್ಲಿ ದೇವಪೂಜೆಯ ಸಮ್ಮಂಧ ಅನಾಸ್ಥೆ ವ ಬೇರೆ ಎಷ್ಟೋ ಅಯೋಗ್ಯ ವರ್ತನಗಳಿಗೆ ಆಸ್ಪದ ವ ಅನವ್ಯಯ ಆಗುತ್ತಿರುವದು ಕಂಡು ಬರುವದರಿಂದ ಇಂಥಾದ್ದಕ್ಕೆ ಉತ್ತೇಜನ ಸಿಗದಂತೆ ಪ್ರಯತ್ನ ಮಾಡುತ್ತಿರುವದು.

(ಬ) ಹಂಗಾಮಿ ವೇಳ್ಯ ಸಂಭಾವನೆಗೆ ಎಂತ ಎಷ್ಟೋ ನಿರುದ್ಯೋಗಿ ವ ಅಪಾತ್ರ ಜನರು ಬಂದು ಫಾಯಿದೆ ಮಾಡಿಕೊಂಡು ಹೋಗುತ್ತಿರುವದರಿಂದ ಇಂಥ ಅನವ್ಯಯಕ್ಕೆ ಉತ್ತೇಜನ ಸಿಗದಂತೆ ಪ್ರಯತ್ನ ಮಾಡುತ್ತಿರುವದು.

(ಕ) ಎಷ್ಟೋ ಜನರು ತಮ್ಮ ವ್ಯಕ್ತಿ ವಿಷಯಕ ಸ್ವಾರ್ಥದ ಸಲುವಾಗಿ ಅನೇಕ ಸಬಬ ಹೇಳಿ ನಮ್ಮ ಜನರಿಗೆ ಗೈರ ಸಮಜೂತ ಉತ್ಪನ್ನ ಮಾಡಿ ದೇಶಾವರ ವಗೈರೆ ಪಡಕೊಂಡು ಹೋಗಿ ದುರುಪಯೋಗ ಮಾಡುವದು ಯಾ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವದು ಕಂಡು ಬರುವದರಿಂದ ವಿಚಾರವಿಲ್ಲದೆ ಅಂಥ ದೇಶಾವರ ವಗೈರೆ ಕೊಡುವದು ನಮ್ಮ ಜನರ ಒಂದು ಅನವ್ಯಯದ ಬಾಬು ಇರುವದರಿಂದ ಇಂಥಾದ್ದಕ್ಕೆ ಉತ್ತೇಜನ ಸಿಗದಂತೆ ಪ್ರಯತ್ನ ಮಾಡುತ್ತಿರುವದು.

(ಡ) ಶುಭಾ ಶುಭ ಕಾರ್ಯಗಳಲ್ಲಿ ಆಗತಕ್ಕ ಎಷ್ಟೋ ಅನವ್ಯಯಗಳನ್ನು ಕಮ್ಮಿ ಮಾಡಲಿಕ್ಕೆ ಯಾ ಬಂದ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿರುವದು.

ಈ ಮೇಲಿನ ವಿಷಯಗಳ ಸಮ್ಮಂಧ ಇಲ್ಲಿ ನಡೆದಿರುವ ಹಕೀಕತು ಈಗ ಕೂಡಿದ ಜನರು ತಮ್ಮ ತಮ್ಮ ತಕ್ತ್ಯಾನುಸಾರ ತಿಳಿಹೇಳಿ ಅಂಥ ಬೇರೆ ಜನರನ್ನು ಸಹಾ ಈ ಮೇಲಿನ ಅಭಿಪ್ರಾಯಕ್ಕೆ ಅನುಸರಿಸಿ ವರ್ತಿಸುವ ಬಗ್ಗೆ ಮನ ಒಲಿಸತಕ್ಕದ್ದು

ಈಗಿನ ವ ಈ ಮೊದಲು ಕೂಡಿದ ಸಭೆಗಳಿಗೆ ಜನರು ಮುದ್ದತಸೀರ ಬಾರದೆ ಅನೇಕ ತರದ ಗೈರ ಸೋಯಿ ವ ಕಾಲವಿಲಂಬ ವಗೈರೆ ಆಗಿರುತ್ತದೆ. ಇದು ಶೋಚನೀಯವಾದ ಸಂಗತಿಯಾಗಿದ್ದು ಇನ್ನು ಮುಂದಾದರೂ ಎಲ್ಲ ಜನರು ಇಂಥ ಪ್ರಸಂಗದಲ್ಲಿ ನೇಮಿಸಿದ ಮುದ್ದತಿಗೆ ಸರಿಯಾಗಿ ಬಂದು ತಮ್ಮ ಹಿತ ಸಮ್ಮಂಧದ ಕೆಲಸದಲ್ಲಿ ಯೋಗ್ಯದಕ್ಷತೆ ತೋರಿಸ್ಯಾರೆಂತಾ ಈಗ ಕೂಡಿದವರು ಆಶಿಸುತ್ತಾರೆ.

ಇದರ ೧೦೦೦ ಒಂದು ಸಾವಿರ ಪ್ರತಿಗಳನ್ನು ಛಾಪಿಸಿ ಶ್ರೀ ಸಂಸ್ಥಾನದ ಮಂಜೂರಿ ನಿರೂಪ ಸಹಿತ ಫಾಯಿಷ ಮಾಡಲಿಕ್ಕೆ ಶ್ರೀ ಸಂಸ್ಥಾನಕ್ಕೆ ಬಿನ್ನೈಸಿಕೊಂಡು ಕೆಲಸ ಪೂರ್ಣ ಪಡಿಸಲಾಯಿತು.

ಮೊಕ್ಕಾಂ ಸೋಂದಾ ಸ್ವರ್ಣವಲ್ಲಿ ಸಂಸ್ಥಾನ ಪ್ರಾರಂಭಿಸಿದ ಮಿತಿ
ಶಕ ೧೮೩೬ ನೇ ಆನಂದ ಸಂವತ್ಸರದ ವೈಶಾಖ ವದ್ಯ ೮ ರವಿವಾರ.
ಪೂರ್ಣ ಪಡಿಸಿದ ಮಿತಿ ವೈಶಾಖ ವದ್ಯ ೯ ಯು ಚಂದ್ರವಾರ.

(ಸಹಿ) ಲಕ್ಷ್ಮಿನಾರಣಪ್ಪ ಬಿನ ಗಣಪಭಟ್ಟ ಗುಂಡಕಲ್ಲು.	" ಗಣೇಶ ನರಸಿಂಹಭಟ್ಟ ಕಾಶೀ
" ತಿಮ್ಮಣ್ಣ ಶಿವಯ್ಯ ಹಳೇಮನೆ.	" ಶಿವರಾಮ ಕೋನೇರಭಟ್ಟ ಕುಂಬತ್ತಿ
" ರಾಮಯ್ಯ ವೆಂಕಪ್ಪ ಹೆಬ್ಬಾರ.	" ರಾಮಚಂದ್ರ ಕೇಶಣ್ಣ ಗಾವಕಾರ.
" ನಾರಣಭಟ್ಟ ಕೃಷ್ಣಭಟ್ಟ ಮಲವಳ್ಳಿ.	" U. G Hegde Alesar.
" ನಾರಾಯಣ ಗಣಪಯ್ಯ ಸಣ್ಣಳ್ಳಿ.	" ಸುಬ್ರಾಯ ಸುಬ್ಬಯ್ಯ ಹೆಗಡೆ.
" ನಾರಾಯಣ ದೇವಪ್ಪಹೆಗಡೆ ಕೋಪಸರ.	" ರಾಮಕೃಷ್ಣ ಶಂಕ್ರಪ್ಪ ಒಳಗಂಡಿ.
" ರಾಮಕೃಷ್ಣ ನರಸಿಂಹ ಹೆಗಡೆ ಅಬ್ರಿಮನೆ.	R. S. Balgandy.
" ಗಣಪಯ್ಯ ಗಿಡ್ಡಯ್ಯ ಹೆಗಡೆ ಬೆಳ್ಳೇಕೇರಿ.	' ಅನಂತ ಸಂಬಯ್ಯ ಹೆಗಡೆ ಬೆಳ್ಳೇಕೇರಿ.
" ತಿಮ್ಮಪ್ಪ ಸುಬ್ಬಯ್ಯ ಹೆಗಡೆ ಕುಪ್ರಿಮನೆ	" ಕುಪ್ಪಣ್ಣ ನರಸಿಂಹ ಹೆಗಡೆ ಬಾಳೆಗದ್ದೆ.
" ಮಂಜಪ್ಪ ದೇವಪ್ಪ ಮಕ್ಕಳಕ್ಯಾಮನೆ.	" ನಾರ್ಣಪ್ಪ ಶಿವಯ್ಯ ಹೆಗಡೆ ಮುಂಡಿಗೆ.
" ಗಣಪಯ್ಯ ವೆಂಕಪ್ಪ ಹೊನ್ನೆಕಟ್ಟು.	' ಸುಬ್ರಾಯ ಸುಬ್ಬಯ್ಯ ಓಣಿಗದ್ದೆ.

" ಗೋವಿಂದ ನರಸಯ್ಯ ಸಿರಿಸೀಕೇರಿ.
" ಗಣಪತಿ ನಾರಾಯಣಭಟ್ಟ ಅಗಸಾಲ.
" ವೆಂಕಟ್ರಮಣ ಈಶ್ವರಪ್ಪಹೆಗಡೆ ಹುಳಗೋಳ ಅಜ್ಜಿ.
" ಸುಬ್ರಾಭಟ್ಟ ಕೃಷ್ಣಭಟ್ಟ ಪಟೇಲ. ಸುಗಾವಿ.
" ನರಸಿಂಹ ನರಸಪ್ಪ ಹೆಗಡೆ ಹಿತ್ಲಳ್ಳಿ.
" ಕೃಷ್ಣಪ್ಪ ತಿಮ್ಮಯ್ಯ ತಾರೇಹಳ್ಳಿ.
" ಗಣಪಯ್ಯ ಹೆಗಡೆ ಕನೆನಳ್ಳಿ.
" ವಿಶ್ವೇಶ್ವರ ಗಣೇಶ ಹೆಗಡೆ ವಕೀಲ.
" ವೆಂಕಪ್ಪ ಸುಬ್ಬಯ್ಯ ಬಿಟ್ಟಗ್ಣಮನೆ.
" ಸುಬ್ಬಯ್ಯ ಬಡಪ್ಪ ಹೆಗಡೆ ಸಿರಿಸೀಕೇರಿ.
" ವೆಂಕಪ್ಪ ಸುಬ್ಬಯ್ಯ ತಾರಗೋಡ.
" ಕೃಷ್ಣಭಟ್ಟ ಶಂಭಟ್ಟ ಬಿಸಲಕೊಪ್ಪ
" ನಂಜುಂಡ ಕೇಪನಯ್ಯ ಕೆರೆಕೊಪ್ಪ.
" ಗಣಪತಿ ಪರಂಭಟ್ಟ ಹಿತ್ಲಳ್ಳಿ.
" ನಾರಣಪ್ಪ ಹೆಗಡೆ ಕುಂದ್ರಿಗೆ
" ರಾಮಕೃಷ್ಣ ಹೆಗಡೆ ಮಾಳಕೊಪ್ಪ.

(PRINTED AT THE STAR OF KANARA PRESS KUMTA BY K. K. SHENVI.)

[illegible]

[illegible]
[illegible]
[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]

(శ్రీ) ✓ [illegible] 1915

శ్రీమత్పరమహంస పరివ్రాజకాచార్య [illegible]

[illegible] శ్రీమత్ [illegible]

[illegible] స్వామి శ్రీ [illegible]

తమ శిష్యులైన [illegible] బ్రాహ్మణ [illegible]

[illegible] కూడి [illegible]

ఆనందసంయుక్త [illegible] తమ ఆశీర్వాదబలమున [illegible]

[illegible] తమ [illegible] శిష్య [illegible]

[illegible] ఆశీసుత్తేమె. [illegible]

నమ్మ వెరువనియ [illegible] నరసింహ, సుబ్రహ్మణ్య [illegible]

[illegible] నమ్మ [illegible]

[illegible] నమ్మ [illegible]

[illegible]

[illegible]

[illegible] నమ్మ [illegible]

[illegible]

[illegible]

[illegible]

[illegible] నమ్మ [illegible]

[illegible] శ్రీ [illegible]

[illegible] నమ్మ [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]
[illegible]
[illegible]
[illegible]
[illegible]

[illegible]

[illegible]

[illegible]

శ్రీ

[illegible]
[illegible]
[illegible]
[illegible]
[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible] 1915

శ్రీ [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ದಿ ಸಾ [illegible]

ಶ್ರೀಮತ್ [illegible] ಮಹಾಸಂಸ್ಥಾನಾಧಿ
ಪತಿ ಶ್ರೀಮತ್ [illegible] ಸರಸ್ವತೀ ಶ್ರೀಪಾದಂಗಳವ
ರ ಕರಕಮಲಸಂಜಾತ ಶ್ರೀಮ [illegible] ಸರಸ್ವತೀ
ಸ್ವಾಮಿಗಳ ವರಚರಣ ಸಂನಿಧಾನಕ್ಕೆ [illegible]

[illegible] ಸಾಷ್ಟಾಂಗ ಬಿನ್ನಹಗಳು [illegible]

[illegible]

ಇಂತಿ [illegible] ಸಾಷ್ಟಾಂಗ ಬಿನ್ನಹಗಳು

[illegible]

ಶ್ರೀ

[illegible]

ಶ್ರೀ ಸಾಮ್ರಾಜ್ಯ [illegible] ವಲ್ಲಭ [illegible]
ಶ್ರೀಪಾದಂಗಳವರ ಕರಕಮಲ ಸಂಜಾತರಾದ ಶ್ರೀ [illegible]
[illegible] ಧರೇಂದ್ರ [illegible] ಶ್ರೀಪಾದಂಗಳವರ ದಿವ್ಯ
ಚರಣಾರವಿಂದಗಳಿಗೆ [illegible]

ತಮ್ಮ ಆಜ್ಞಾಧಾರಕ ಶಿಷ್ಯನಾದ [illegible]
[illegible] ಪ್ರಣಾಮಗಳು ಮಾಡುವ [illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಂದನಂತ್ರೆನನಣಂತಲ್ಲಿ ಸಿದರಿವರಿತಿನಂಪನ್ನ ಶ್ರೀಮನ್ಮಹಾ ವಿ
ದ್ವಿತೀಯ ವಿಭಾಗದ ರ... ಲೋಕ್ಯ ... ನಾಲ್ಕನೆಯ
ಂತರ ಹಂಚಿ ಹಾನದ ...
ಪ್ರಕರಣ ಆರಿಸಿ ವಿಭಾಗವಾಡಿಯಲ್ಲಿ ದೆ. ಇದರಿಂದ ಉತ್ತರ
ತದೆ ಆದರೆ ಂಮೂರನೇ — ಸಂಪನ್ನ ... ಕೃತಿ ...
ಅಂತೆ ... ಬಾಕಿ ಂತ ... ವಿಶಂಯ ... ನಂತರ
... ಬದ್ಧ ... ದಂತಗಾಲನ ... ಸಂಪ
ಪ್ರತ್ಯಾರ್ಥನಾ ದವ ... ವಿತ್ತೇನೆ. - - ~
ಂಯಂ ... ಂಗವಿಂನ ಹಂಸ ...

1916



ಅನುಕ್ರಮನಂಬರು. 3

ಶ್ರೀನಾರಾಯಣ

ಶ್ರೀಲಕ್ಷ್ಮೀನೃಸಿಂಹ   ಶ್ರೀಗಂಗಾಧರೇಂದ್ರ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪದವಾಕ್ಯಪ್ರಮಾಣಪಾರಾವಾರಪಾರೀಣ ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನಗುರುಪರಂಪರಾಪ್ರಾಪ್ತ ಷಣ್ಮತಸ್ಥಾಪನಾಚಾರ್ಯ ಕ್ರಮಾಗತಶ್ರೌತಸ್ಮಾರ್ತಕರ್ಮಮಾರ್ಗವ್ಯವಸ್ಥಾಪಕಾಶೇಷತ್ರಯ್ಯಂತಾದ್ವೈತಸಿದ್ಧಾಂತಪ್ರಬಂಧಪ್ರವರ್ತಕತ್ವಾದಿರಾಜಧಾನೀ ವಿದ್ಯಾನಗರಮಹಾರಾಜಧಾನೀ ಶ್ರೀಮತ್ಸುಧಾಪುರವರಸಿಂಹಾಸನಾಧೀಶ್ವರ ಸರ್ವತಂತ್ರಸ್ವತಂತ್ರ ವ್ಯಾಖ್ಯಾನಸಿಂಹಾಸನಾಧಿಷ್ಠಿತ ರಾಜಾಧಿರಾಜ ದೇಶಿಕ ಗೋಕರ್ಣಮಂಡಲಾಧೀಶ ಸಹ್ಯಾದ್ರಿಪುರವರಾಧೀಶ್ವರ ಶಾಲ್ಮಲೀತೀರವಾಸ ಶ್ರೀಮಲ್ಲಕ್ಷೇತ್ರಸ್ಥ ಸಿಂಹಚಂದ್ರಮೌಳಿಪದಪಂಕೇರುಹರಸಗ್ರಾಸಾಳಿವನ್ಮಾನಸ ಶ್ರೀಮತ್ಸೋಂದಾಸ್ವರ್ಣವಲ್ಲೀಮಹಾಸಂಸ್ಥಾನಾಧೀಶ್ವರ ಶ್ರೀಮತ್ಸರ್ವಜ್ಞೇಂದ್ರಸರಸ್ವತೀಶ್ರೀಪಾದಂಗಳವರ ಕರಕಮಲಸಂಜಾತ ಶ್ರೀಮದ್ಗಂಗಾಧರೇಂದ್ರಸರಸ್ವತೀಶ್ರೀಸ್ವಾಮಿಭಿಃ

ಅಸ್ಮಾಕಂ.

ಅತ್ಯಂತ ಪ್ರಿಯಶಿಷ್ಯರಾದ ಶಿರ್ಶಿ, ಸಿದ್ದಾಪುರ, ಯಲ್ಲಾಪುರ, ಕುಮಟಾ, ಅಂಕೋಲಾ, ಈ ತಾಲೂಕ ನಿವಾಸೀ ಅಶೇಷ ಹವ್ಯಕಶಿಷ್ಯವೃಂದಕ್ಕೆ—

ಸ್ಮರಣಪೂರ್ವಕವಾಗಿ ಬರೆಸಿ ಪಾಲಿಸಿದ ನಿರೂಪ. ಶಕೆ ೧೮೩೮ ನೇ ನಳನಾಮ ಸಂವತ್ಸರದ ಪುಷ್ಯಕೃಷ್ಣ ೧೦ ಯು ಗುರುವಾರದಲ್ಲು ಶ್ರೀದೇವರ ಸಂನಿಧಿಯಲ್ಲಿ ನಿಮ್ಮಗಳ ಶ್ರೇಯೋಭಿವೃದ್ಧಿಗಳನ್ನು ಪ್ರಾರ್ಥಿಸುತ್ತಾ ಶ್ರೀಮಠದಲ್ಲಿ ಯೋಗಾನುಭವಪರರಾಗಿದ್ದೇವೆ. ಸಂಪ್ರತಿ.

ಜಗದುತ್ಪತ್ತಿಕಾರಣನಾದ ಶ್ರೀಭಗವಂತನು ಸೃಷ್ಟಿಸ್ಥಿತಿನಿಬಂಧನೆಗೋಸ್ಕರ ಮಾಡಲ್ಪಟ್ಟ ಧರ್ಮಪ್ರವರ್ತಿಗೆ ಗ್ಲಾನಿಬಾರದಂತೆ ಆಗಾಗ್ಯೆ

यदा यदा हि धर्मस्य ग्लानिर्भवति भारत ॥
अभ्युत्थानमधर्मस्य तदात्मानं सृजाम्यहम् ॥

ಎಂಬ ನ್ಯಾಯದಿಂದ ಧರ್ಮಸಂಸ್ಥಾಪನಾರ್ಥವಾಗಿ ಯುಗಯುಗದಲ್ಲಿ ಅವತಾರ ಮಾಡುತ್ತಿರುವನು

ಈ ಪ್ರಕಾರ ಧರ್ಮನಿಬಂಧನೆಗೋಸ್ಕರ

कृते विश्वगुरुर्ब्रह्मा त्रेतायां ऋषिसत्तमः ॥
द्वापरे व्यास एव स्यात्कलावत्र भवाम्यहम् ॥

ಎಂಬಂತೆ ಕಲಿಯುಗದಲ್ಲಿ ಶ್ರೀಮಚ್ಛಂಕರಾಚಾರ್ಯರ ಅವತಾರವಾಯಿತು.

ಈ ಶಂಕರಾಚಾರ್ಯರ ಶಿಷ್ಯರಾದ ಭಾಸ್ಕರೇಂದ್ರಸರಸ್ವತೀಶ್ರೀಪಾದಂಗಳವರಿಂದ ಅಹಿಚ್ಛತ್ರದ ಗುಣನಿಧಿಯೆಂಬ ಒಬ್ಬ ಬ್ರಾಹ್ಮಣ ಬಟುವು ಶ್ರೀಕಾಶೀಕ್ಷೇತ್ರದಲ್ಲಿ ಉಪದೇಶವ

ನ್ನು ಹೊಂದಿ ವಿಶ್ವವಂದ್ಯಸರಸ್ವತೀಯೆಂಬ ಯೋಗಪಟ್ಟನಾಮದಿಂದ ಪ್ರಸಿದ್ಧರಾದರು. ಈ ವಿಶ್ವವಂದ್ಯಸರಸ್ವತೀಶ್ರೀಪಾದಂಗಳವರ ಶಿಷ್ಯರಾದ ನಾರಾಯಣೇಂದ್ರಸರಸ್ವತೀಶ್ರೀಪಾದಂಗಳವರು ಉಜ್ಜಯಿನೀಪಟ್ಟಣಕ್ಕೆ ಬಂದು ಅಲ್ಲಿ ರಾಜಾಶ್ರಯದಿಂದ ಮಠಸ್ಥಾಪನೆಮಾಡಿ ಶಿಬಿಕಾದ್ಯನೇಕ ಬಿರುದಾವಲಿಗಳನ್ನು ಹೊಂದಿದ್ದು ಅಲ್ಲಿ ಕೆಲವು ಪರಂಪರೆಯು ನಡೆಯಿತು.

ಈ ಪರಂಪರೆಯು ವಿಶ್ವನಾಥಸರಸ್ವತೀಶ್ರೀಪಾದಂಗಳವರು ತಮ್ಮ ಶಿಷ್ಯರಾದ ಗಂಗಾಧರೇಂದ್ರಸರಸ್ವತೀಶ್ರೀಪಾದಂಗಳವರನ್ನು ಕರಕೊಂಡು ಸಂಚಾರಾರ್ಥವಾಗಿ ಗೋದಾವರೀತೀರದಲ್ಲಿ ತ್ರ್ಯಂಬಕೇಶ್ವರಕ್ಕೆ ಬಂದಾಗ್ಯೆ ಹೈವದೇಶದ ಬ್ರಾಹ್ಮಣರಿಂದ ತಮ್ಮ ದೇಶಕ್ಕೆ ಬರಬೇಕೆಂತಲೂ ತಾವು ನಮ್ಮನ್ನು ಧರ್ಮಾಧರ್ಮವಿಚಾರಕ್ಕೆ ಗುರುಗಳನ್ನಾಗಿ ಮಾಡಿಕೊಂಡು ನಮ್ಮ ಶಿಷ್ಯರಾಗಿರುತ್ತೇವೆಂತಲೂ ಪ್ರಾರ್ಥಿಸಲ್ಪಟ್ಟು, ಗಂಗಾಧರೇಂದ್ರಸರಸ್ವತೀಶ್ರೀಪಾದಂಗಳವರು ಈ ಗೋರಾಷ್ಟ್ರಕ್ಕೆ ಬಂದರು. ಆ ಲಾಗಾಯತು ಕೆಲವು ಕಾಲ ಶ್ರೀಗೋಕರ್ಣಕ್ಷೇತ್ರದಲ್ಲಿ ಅನಂತರ ಕೆಲವು ಕಾಲ ಕರ್ದೋಳಿಯಲ್ಲಿ ಈ ಪರಂಪರೆಯು ನಡೆಯಿತು.

ನಂತರ ಈ ಪರಂಪರೆಯ ವಿಶ್ವನಂದ್ಯಸರಸ್ವತೀ ಎಂಬ ಹೆಸರಿನ ಸ್ವಾಮಿಗಳವರು ಸುಧಾಪುರ (ಸೋದೆ) ದ ನರಸಿಂಹರಾಜರಿಂದ ಆಮಂತ್ರಿಸಲ್ಪಟ್ಟು ರಾಜಧಾನಿಯ ಸಮೀಪ ಶಾಲ್ಮಲೀನದಿಯ ತೀರದಲ್ಲಿ ಸಹಸ್ರಲಿಂಗವೆಂಬ ಮಠವನ್ನು ಸ್ಥಾಪಿಸಿಕೊಂಡು ಉಳಿದರು. ಇಲ್ಲಿ ಕೆಲವು ಕಾಲ ಪರಂಪರೆಯು ನಡೆಯಿತು.

ಹೀಗಿರುವಲ್ಲಿ ಸಹಸ್ರಲಿಂಗಮಠಕ್ಕೆ ಜಲೋಪದ್ರವವುಂಟಾಗುತ್ತಿದ್ದುದರಿಂದ ಆ ಕಾಲದ ಸೋದೆಯ ಅರಸರಾದ ಅರಸಪ್ಪನಾಯಕರೆಂಬವರು ಶ್ರೀಶಾಲಿವಾಹನ ಶಕ ವರ್ಷ ೧೫೭೮ ನೇ ರಾಕ್ಷಸ ಸಂವತ್ಸರದಲ್ಲಿ ಆಗಿನ ಚಂದ್ರಶೇಖರಸರಸ್ವತೀಶ್ರೀಪಾದಂಗಳವರಿಗೆ ಶ್ರೀಸ್ವರ್ಣವಲ್ಲೀಮಠವೆಂಬ ಹೆಸರಿನಿಂದ ಈಗಿನ ಮಠವನ್ನು ಕಟ್ಟಿಸಿಕೊಟ್ಟು ಉಪವನವನ್ನು ಕಡಿಸಿ ಹೊನ್ನೇಹಳ್ಳಿಯೆಂಬ ಹೆಸರಿನಿಂದ ತಯಾರುಮಾಡಿದ ಪೂಗಾರಾಮವನ್ನು (ಅಡಿಕೆಯ ತೋಟವನ್ನು) ವ ಇದಲ್ಲದೇ ಅನೇಕ ಜಮೀನುಗಳನ್ನು ಧರ್ಮಬಿಟ್ಟರು. ಆ ನಂತರ ಸಹ ಅವರ ವಂಶದ ಬೇರೆ ಬೇರೆ ಅರಸರೂ ಇತರೇ ಅನೇಕ ಶಿಷ್ಯಜನರೂ ಬಹುತರವಾಗಿ ಅನೇಕ ಜಮೀನು ಮುಂತಾದವುಗಳನ್ನು ಧರ್ಮಬಿಟ್ಟದ್ದರಿಂದ ಈ ಮಠವು ಅಭಿವೃದ್ಧಿಹೊಂದಿ ಸದೆಮ ಬಂದಿರುತ್ತದೆ. ಈ ಪ್ರಕಾರ ಪೂರ್ವಕಾಲದಿಂದ ರಾಜಾಶ್ರಯದಿಂದಲೂ ಶಿಷ್ಯವೃಂದದ ಆಶ್ರಯದಿಂದಲೂ ಈ ಮಠದ ಪರಂಪರೆಯು ನಡೆಯುತ್ತ ಬಂದು ಅದಕ್ಕೆ ಹೊಂದಿದ ಧರ್ಮವಿಚಾರದ ಕರ್ತವ್ಯವು ನಡಿಸಲ್ಪಡುತ್ತ ಬಂದದೆ.

ಈ ಪ್ರಕಾರ ಮೇಲಿನ ಶ್ಲೋಕದಲ್ಲಿ ಹೇಳಿದಂತೆ ನಾರಾಯಣಾದಿ ಕಾಲದ ಲಾಗಾಯತು ಬ್ರಹ್ಮನಿಂದ ವಸಿಷ್ಠರು, ವಸಿಷ್ಠರಿಂದ ಶಕ್ತಿ, ಶಕ್ತಿಯಿಂದ ಪರಾಶರರು, ಪರಾಶರರಿಂದ ವ್ಯಾಸರು, ವ್ಯಾಸರಿಂದ ಶುಕಾಚಾರ್ಯರು, ಶುಕಾಚಾರ್ಯರಿಂದ ಗೌಡಪಾದಾಚಾರ್ಯರು, ಗೌಡಪಾದಾಚಾರ್ಯರಿಂದ ಗೋವಿಂದಪಾದಾಚಾರ್ಯರು, ಗೋವಿಂದಪಾದಾಚಾರ್ಯರಿಂದ ಶಂಕರಾಚಾರ್ಯರು ಎಂಬಂತೆ ಪರಂಪರೆಯನ್ನು ಹೊಂದಿದ ಶಂಕರಾಚಾರ್ಯರ ಶಿಷ್ಯರಾದ ಭಾಸ್ಕರೇಂದ್ರಸರಸ್ವತೀ ಶ್ರೀಪಾದಂಗಳವರಿಂದ ಉದ್ಭವವಾಗಿ ಈ ವರೆಗೆ ಅವಿಚ್ಛಿನ್ನವಾಗಿ ನಡಿಯುತ್ತ ಬಂದಿರುತ್ತಿದ್ದ ಈ ಮಠದ ಯತಿಗಳ ಪರಂಪರೆಯು ಇನ್ನು ಮುಂದೆ ಸಹ ಇದರಂತೆ ನಡಿಯಬೇಕೆಂಬ ಉದ್ದೇಶದಿಂದ ಇದೇ ನಳಸಂವತ್ಸರದ ಮಾಘಶುಕ್ಲ ದಶಮೀಯು ಗುರುವಾರದಿವಸ ನಮ್ಮ ನಂತರ ಈ ಮಠಕ್ಕೆ ಅಧಿಕಾರಿಗಳಾಗುವಂತೆ ವಿದ್ಯುಕ್ತಸನ್ಯಾಸವಿಗ್ರಹಪೂರ್ವಕ ಶಿಷ್ಯರನ್ನು ಮಾಡಿಕೊಳ್ಳುವದು ನಿಶ್ಚಯಿಸಿ ಅದೆ. ಆ ಸಮ್ಬಂಧೀ ನಡಿಯತಕ್ಕ ಕರ್ಮಕ್ರಮಗಳು — ಇದೇ ಮಾಘ ಶುಕ್ಲ ನವಮಿಯು ಬುಧವಾರ ಸನ್ಯಾಸಗ್ರಹಣಾಂಗಭೂತ ಗಾಯತ್ರೀಜಪ, ರುದ್ರಜಪ, ಕೂಷ್ಮಾಂಡಹೋಮ, ಕೃಚ್ಛ್ರಾಚರಣ, ತರ್ಪಣ. ಅಷ್ಟಕಶ್ರಾದ್ಧ, ಕ್ಷೌರ, ದಂಡವಸ್ತ್ರಾದಿಗಳ ಸಿದ್ಧತೆ ಸನ್ಯಾಸಗ್ರಹಣಸಂಕಲ್ಪ, ಪುಣ್ಯಾಹವಾಚನ, ನಾಂದೀಶ್ರಾದ್ಧ, ಸಾವಿತ್ರೀಪ್ರವೇಶ, ಬ್ರಹ್ಮಾನ್ವಾಧಾನಪೂರ್ವಕ ಅಗ್ನಿಸಿದ್ಧಿ. ದಶಮಿಯು ಗುರುವಾರ ಪ್ರಾಜಾಪತ್ಯಹೋಮ, ಪುರುಷಸೂಕ್ತಹೋಮ, ವಿರಜಾಹೋಮ, ಸರ್ವತ್ಯಾಗ, ಪ್ರೈಷೋಚ್ಚಾರ. ಕಾಷಾಯವಸ್ತ್ರ, ದಂಡಾದಿಧಾರಣ, ಪರ್ಯಂಕಶೌಚ, ಯೋಗಪಟ್ಟ, ಸಪ್ರೋಪಾಯನ (ಪ್ರಥಮದರ್ಶನ ಕಾಣಿಕೆ), ಮಹಾಸಂತರ್ಪಣೆ, ಇತ್ಯಾದಿ ಕರ್ಮಗಳು ನಡಿಯತಕ್ಕವು ಇರುವದರಿಂದ ಆ ಬಗ್ಗೆ ಸಕಲ ಶಿಷ್ಯಜನರು ವ ಸಭ್ಯ ಗೃಹಸ್ಥರು ಶ್ರೀ ಮಠದಲ್ಲಿ ಆಗಮಿಸಿ ಅಭಿನಂದಿಸುವದು ಅತ್ಯಾವಶ್ಯಕವಾದ್ದರಿಂದ ನೀವು ನಿಮ್ಮ ಇಷ್ಟಮಿತ್ರ ಬಂಧು ಬಾಂಧವರೊಡಗೊಂಡು ಬಂದು ಶ್ರೀಗುರುದೇವರ ಅನುಗ್ರಹಕ್ಕೆ ಪಾತ್ರರಾಗುವಲ್ಲಿ ಸುಜ್ಞರಾದ ಸಂಸ್ಥಾನಸಾಭಿಮಾನಿಗಳಿಗೆ ವಿಸ್ತಾರ ನಿರೂಪಿಸುವದೇನು?

इति नारायणस्मृतिः

ಸುಬೋಧಿನೀ ಛಾಪಖಾನೆ ಶಿರಸಿ.

DIVISIONAL FOREST OFFICE KANARA. EASTERN DIVISION.

ಬೆಟ್ಟದ ಸಲುವಾಗಿ ಜಂಗಲು ಭೂಮಿಗಳನ್ನು ಪಟ್ಟೆಯಿಂದ ಕೊಡುವ ವಿಷಯದ ಕರಾರನಾಮೆಯ ನಮೂನೆ.

ಸನ್ ೧೮೭೮ ನೇ ಇಸವಿಯ ಹಿಂದುಸ್ಥಾನದ ಜಂಗಲಿನ ಆಕ್ಟಿನ (ಇದಕ್ಕೆ ಇದರಲ್ಲಿ ಮುಂದೆ "ಸದರಿ ಆಕ್ಟು" ಎಂದು ಕರೆದದೆ) ಕಲಮುಗಳಿಗೂ ಅದರನ್ವಯ ಮಾಡಿದ ಕಾನೂನುಗಳಿಗೂ ಒಳಪಟ್ಟು, ಒಂದು ಸಾವಿರ ಒಂಭೈನೂರಾ [illegible] ನೇ ಇಸವಿಯ [illegible] ತಿಂಗಳ 19 ನೇ ತಾರೀಖಿನ ದಿವಸ, ಒಂದು ಕಡೆಗೆ ಹಿಂದುಸ್ಥಾನದ ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್‌ರವರು (ಇವರಿಗೆ ಇದರಲ್ಲಿ ಮುಂದೆ "ಸೆಕ್ರೆಟರಿ ಆಫ್ ಸ್ಟೇಟ್" ಎಂದು ಕರೆದದೆ ಮತ್ತು ಈ ಸಂಜ್ಞೆಯಲ್ಲಿ ಅವರ ಜಾಗೆಯ ಮೇಲೆ ಇನ್ನು ಮುಂದೆ ಬರತಕ್ಕವರು ಅಥವಾ ಅವರ ಅಸೈನರು ಸಮಾವೇಶ ಪಡುತ್ತಾರೆ) ಮತ್ತು ಮತ್ತೊಂದು ಕಡೆಗೆ [illegible] (ಇವರಿಗೆ ಇದರಲ್ಲಿ ಮುಂದೆ "ಪಟ್ಟೇದಾರನು (ರು)" ಎಂದು ಕರೆದದೆ ಮತ್ತು ಈ ಸಂಜ್ಞೆಯಲ್ಲಿ ~~[illegible]~~ ಅವನ ವಾರಸದಾರರು, ಮೃತ್ಯುಪತ್ರ ನಡಿಸುವವರು, ವಹಿವಾಟ ನಡಿಸುವವರು, ಆಸ್ತಿಯನ್ನು ತಬದೀಲ ಮಾಡಿಕೊಂಡವರು ಅಥವಾ ಅಸೈನರು, ಒಟ್ಟಾಗಿ ಮತ್ತು ಬೇರೆ ಬೇರೆಯಾಗಿ, ಮತ್ತು ~~[illegible]~~ ಅವನ ಮೂಲಕ ಹಕ್ಕು ಹೇಳುವ ಯಾವನಾದರೂ ಮನುಷ್ಯನು ಸಮಾವೇಶ ಪಡುತ್ತಾರೆ) ಇವರೊಳಗೆ ಆದ ಕರಾರನಾಮೆಯು.

ರೆವ್ಹಿನ್ಯೂ ಡಿಪಾರ್ಟಮೆಂಟಿನೊಳಗಿನ ಸರಕಾರೀ ಜಾಹೀರನಾಮೆ, ನಂಬರು ೮೨೦೩-೭, ತಾರೀಖು ೨೨ ನೇ ಮಾಹೆ ನವ್ಹಂಬರ ಸನ್ ೧೯೦೨ನೇ ಇಸವಿ, ಇದರಲ್ಲಿ ಪ್ರಸಿದ್ಧ ಮಾಡಿದ ಕಾನಡಾ ಜಿಲ್ಹೆಯ ಸಂರಕ್ಷಿತ ಮಾಡಿದ ಜಂಗಲುಗಳ ಸಂಬಂಧಿ ಕಾನೂನುಗಳನ್ವಯ, ಸದರಿ ಕಾನೂನುಗಳಲ್ಲಿ ಹೇಳಿದ ಕೆಲವು ವರ್ಗದ ಜನರಿಗೆ ಅವುಗಳಲ್ಲಿಯೇ ಹೇಳಿದ ಕೆಲವು ತರದ ಜಂಗಲಿನ ಉತ್ಪನ್ನವನ್ನು, ಫೀನೂ ಕೊಡದೆ ಅಥವಾ ಫೀಸನ್ನು ಪಡೆಯದೆ, ಸಗೆದೊಯ್ಯಲಿಕ್ಕೆ ಪರವಾನಗಿ ಕೊಟ್ಟಿರುವದರಿಂದ, ಮತ್ತು ಸದರೀ ಜನರಿಂದ ಇಂಥ ಹಕ್ಕುಗಳ ದುರುಪಯೋಗವಾಗದಂತೆ ತಜವೀಜು ಮಾಡುವದು ಇಷ್ಟವಾಗಿರುವದರಿಂದ;

ಮತ್ತು ಮುಂಬಯಿಯ ಗವರ್ನರ್ ಇನ್ ಕೌನ್ಸಿಲ್‌ರವರು ಸದರೀ ಆಕ್ಟಿನ ೭೫ ನೇ ಕಲಮಿನ (ಡ) ರಕಮಿನನ್ವಯ ಮಾಡಿದ ಮತ್ತು ರೆವ್ಹಿನ್ಯೂ ಡಿಪಾರ್ಟಮೆಂಟಿನೊಳಗಿನ ಸರಕಾರೀ ಜಾಹೀರನಾಮೆ, ನಂಬರು ೫೭೨೦, ತಾರೀಖು ೬ ನೇ ಮಾಹೆ ಅಗಸ್ಟ ಸನ್ ೧೯೦೩ನೇ ಇಸವಿ, ಇದರಲ್ಲಿ ಪ್ರಸಿದ್ಧ ಮಾಡಲ್ಪಟ್ಟ ಕಾನೂನುಗಳ ಮೇರೆಗೆ, ಸರಕಾರದ ಬಗ್ಗೆ ಕೆಲಸ ಮಾಡುವ ಯಾವನಾದರೂ ಫಾರೆಸ್ಟ ಆಫೀಸರನ ಕೂಡ ಯಾವದಾದರೂ ಕರಾರು ಮಾಡುವ ಪ್ರತಿಒಬ್ಬ ಮನುಷ್ಯನು, ಸದರೀ ಫಾರೆಸ್ಟ ಆಫೀಸರನು ಹೇಳಿದರೆ, ಒಂದು ಲೇಖೀ ದಸ್ತೈವಜನ್ನು ಬರಕೊಟ್ಟು ಅದರ ಮೂಲಕ ಇಂಥ ಕರಾರನ್ನು ಕೊನೆಗಾಣಿಸಲಿಕ್ಕೆ ತನ್ನನ್ನು ಬದ್ಧ ಮಾಡಿಕೊಳ್ಳುವದು ಅವಶ್ಯವಿದ್ದದರಿಂದ;

